# ಪ್ರಾಚೀನ ಭಗವದ್ಗೀತೆ
## ಎಪ್ಪತ್ತು ಶ್ಲೋಕಗಳು

■ ಸ್ವಾಮಿ ಮಂಗಳಾನಂದ ಪುರಿ

ಮಹಾಭಾರತದ ಭೀಷ್ಮ ಪರ್ವದಲ್ಲಿ ಉಲ್ಲೇಖಿಸಲ್ಪಟ್ಟ ಭಗವದ್ಗೀತೆಯು ಜಗತ್ತಿನ ಅನುಪಮ ಗ್ರಂಥಗಳಲ್ಲೊಂದಾಗಿದೆ. ಈ ಗೀತೆಯು ೧೮ ಅಧ್ಯಾಯಗಳಲ್ಲಿ ಸಂಗ್ರಹಿತವಾಗಿ ೭೦೦ ಶ್ಲೋಕಗಳನ್ನೊಳಗೊಂಡಿದೆ ಎಂಬ ವಿಷಯ ಸರ್ವವಿದಿತ. ಮಹಾಭಾರತ ಯುದ್ಧದ ಆರಂಭದಲ್ಲಿಯೇ ತನ್ನ ಬಂಧು-ಬಳಗದವರನ್ನು ಮತ್ತು ಗುರುಹಿರಿಯರನ್ನು ನೋಡಿ ಅರ್ಜುನನ ಮನಸ್ಸು ವಿಚಲಿತವಾಯಿತು. ಇವರೆಲ್ಲರ ಸಂಹಾರವನ್ನು ಮಾಡಿ ನಿಶ್ಚಿತವಾಗಿಯೂ ಗುರುತರವಾದ ಪಾಪಕ್ಕೆ ಬಲಿಯಾಗುವೆನೆಂಬ ಭೀತಿ ಅವನನ್ನು ಬಾಧಿಸತೊಡಗಿತು. ಆ ಸಮಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಕ್ಷಾತ್ರ ಧರ್ಮದ ಮಹತ್ವವನ್ನು ತಿಳಿಸಿ ಕರ್ತವ್ಯದ ಕಡೆಗೆ ಗಮನ ಸೆಳೆದು ಯುದ್ಧಕ್ಕೆ ಪ್ರೇರೇಪಿಸಿದನು. ಈ ಸಂದರ್ಭದಲ್ಲಿ ಉಪದೇಶಿಸಿದ ತತ್ತ್ವಗಳೇ ೭೦೦ ಶ್ಲೋಕಗಳ ಗೀತೆ. ಅನೇಕ ವಿದ್ವಾಂಸರ ಮತಾನುಸಾರ ರಣರಂಗದಲ್ಲಿ ಉಭಯ ಪಕ್ಷದ ಸೇನೆಗಳೂ ಯುದ್ಧಕ್ಕೆ ಸನ್ನದ್ಧರಾಗಿರುವಾಗ ಇಷ್ಟು ವಿಸ್ತೃತವಾಗಿ ಉಪದೇಶ ಮಾಡುವುದು ಸಂಭವವಲ್ಲ. ಆಗಿನ ಪರಿಸ್ಥಿತಿಗನುಸಾರ ಅವಶ್ಯವಾದ ಅಲ್ಪ ಉಪದೇಶವನ್ನು ಮಾಡಿರಬೇಕು. ಅದೇ ಕ್ರಮೇಣ ವಿಸ್ತರಿಸಲಾಯಿತು.

ಶ್ರೀ ಬಾಲಗಂಗಾಧರ ತಿಲಕರು ತಮ್ಮ 'ಗೀತಾರಹಸ್ಯ'ದಲ್ಲಿ ತಮ್ಮ ವಿಚಾರವನ್ನು ಈ ರೀತಿ ಅಭಿವ್ಯಕ್ತಪಡಿಸಿದ್ದಾರೆ. "ಗೀತೆಯ ಸಂಬಂಧದಲ್ಲಿ ಈ ರೀತಿ ವಿಚಾರಗಳು ಮನಸ್ಸಿನಲ್ಲಿ ಒಡಮೂಡಿದ ಕಾರಣ ಗೀತಾ ಸಾಗರದಲ್ಲಿ ಮುಳುಗಿ ಕೆಲವರು ೭, ಕೆಲವರು ೨೮, ಕೆಲವರು ೩೬ ಮತ್ತು ಕೆಲವರು ೧೦೦ ಶ್ಲೋಕಗಳನ್ನು ಕಂಡು ಹಿಡಿದಿದ್ದಾರೆ... ಪ್ರಯತ್ನ ಪೂರ್ವಕವಾಗಿ ಕಂಡುಹಿಡಿದ ಈ ಮಾತುಗಳನ್ನು ನಿರರ್ಥಕವೆಂದು ಹೇಳಲು ಸಾಧ್ಯವಿಲ್ಲ."

ಕಳೆದ ಮೂವತ್ತೇಳು ವರ್ಷಗಳಿಂದ ಭಗವದ್ಗೀತೆಯು ಅಧ್ಯಯನ ಮಾಡುತ್ತಿರುವ ನನಗೆ ಶ್ರೀಕೃಷ್ಣಾರ್ಜುನ ಸಂವಾದ ಇಂದಿನ ಕಾಲದಲ್ಲಿ ಬಳಕೆಯಲ್ಲಿರುವ ಗೀತೆಗಿಂತ ಬಹಳ ನ್ಯೂನವಾಗಿರಬೇಕೆಂಬ ವಿಶ್ವಾಸ ದೃಢವಾಗಿತ್ತು. ಇಷ್ಟರಲ್ಲೇ ೭೦ ಶ್ಲೋಕಗಳನ್ನೊಳಗೊಂಡ ಗೀತೆಯನ್ನು ನೋಡುವ ಸೌಭಾಗ್ಯ ನನಗೊದಗಿಬಂತು. ತದೇಕ ಚಿತ್ತದಿಂದ ಅಧ್ಯಯನ ಮಾಡಿದಾಗ ಮತ್ತು ಪರಸ್ಪರ ಸಂಬಂಧದ ಬಗ್ಗೆ ವಿವೇಚಿಸಿದಾಗ, ಭಗವಾನ್ ಕೃಷ್ಣನ ಉಪದೇಶ ಇಷ್ಟರಲ್ಲಿಯೇ ಪೂರ್ಣವಾಗುತ್ತದೆಂದು ಖಚಿತವಾಯಿತು. ಉಳಿದ ಎಲ್ಲಾ ಶ್ಲೋಕಗಳು ಈ ಎಪ್ಪತ್ತು ಶ್ಲೋಕಗಳ ವ್ಯಾಖ್ಯಾನವಾಗಿವೆ.

ಎಪ್ಪತ್ತು ಶ್ಲೋಕಗಳ ಗೀತೆ ಎಲ್ಲಿ ಪ್ರಾಪ್ತವಾಯಿತು?

ಈ ಗೀತೆಯನ್ನು ನಾನು ಬಾಂಕೀಪುರದ ಸಾಪ್ತಾಹಿಕ ಪತ್ರಿಕೆ "ಪಾಟಲೀಪುತ್ರ" ಶ್ರಾವಣ ಶುಕ್ಲ ೨ ಶನಿವಾರ ವಿಕ್ರಮ ಸಂವತ್ ೧೯೭೧ರಲ್ಲಿ ಓದಿದೆ. ಯಾವ ಲೇಖನದ ಆಧಾರದ ಮೇಲೆ ಇದು ಪ್ರಕಾಶಿಲ್ಪಟ್ಟಿತ್ತೋ ಅದನ್ನೂ ನೋಡಿದೆ, ಅದು ೧೯೧೪ನೇ ಇಸವಿ ಜುಲೈ ಮಾಸದಲ್ಲಿ ಕಲ್ಕತ್ತದಲ್ಲಿ ಮುದ್ರಿತವಾದ "ಮಾಡರ್ನ್ ರಿವ್ಯೂ" (Modern Review)ವಿನ ಪುಟಸಂಖ್ಯೆ ೩೨ರಿಂದ ೩೮ರ ವರೆಗೆ ಪ್ರಕಾಶಿತವಾಗಿತ್ತು. ಇದರ ಲೇಖಕರು ಡಾ. ನರಗೋಪಾಲ ಸರದೇಸಾಯಿಯವರು. ಲೇಖನದ ಶೀರ್ಷಿಕೆ. Bhagavad Githa from the Island of Bali. ಅದರ ಸಾರಾಂಶ ಹೀಗಿದೆ.

ಬಾಲಿದ್ವೀಪವು ಜಾವಾದ್ವೀಪದ ಸನಿಹದಲ್ಲಿದೆ, ಜಾವಾದ್ವೀಪದಲ್ಲಿ ಹಿಂದುಗಳ ನೆಲೆಯಿತ್ತು. ರಾಜ್ಯವು ಹಿಂದುಗಳದಾಗಿತ್ತು. ಸನ್ ೧೪೭೮ರಲ್ಲಿ ಮುಸ್ಲಿಮರು ಧಾಳಿ ಮಾಡಿ ನಾಶ ಮಾಡಿದರು ಮತ್ತು ಅಲ್ಲಿಯ ಹಿಂದುಗಳನ್ನು ಮುಸ್ಲಿಮರನ್ನಾಗಿ



ಮಾಡಿದರು. ಇಂದಿಗೂ ಆ ಮುಸ್ಲಿಮರಲ್ಲಿ ಹಿಂದುಗಳ ಸಂಸ್ಕಾರ. ರೀತಿ–ನೀತಿಗಳು ಕಂಡುಬರುತ್ತವೆ. ಜಾವಾದಲ್ಲಿ ಕೆಲವು ಬೌದ್ಧರಿದ್ದಾರೆ. ಆದರೆ ಹಿಂದುಗಳಿಲ್ಲ. ವಾಲ್ಮೀಕಿ ರಾಮಾಯಣದಲ್ಲಿ ಇದನ್ನು ಯುವದ್ವೀಪ – ಎಂದಿದೆ. ಜಾವಾ ದ್ವೀಪವು ಹಿಂದು ಸಭ್ಯತೆಯ ಕೇಂದ್ರವಾಗಿತ್ತು ಮತ್ತು ದೊಡ್ಡ ದೊಡ್ಡ ವಿದ್ವಾಂಸರು ಮತ್ತು ಶೂರವೀರರು ಅಲ್ಲಿಗೆ ಹೋಗಿದ್ದರು. ಭಾರತದಿಂದ ಬ್ರಾಹ್ಮಣರು ಸಂಸ್ಕೃತ ಗ್ರಂಥಗಳನ್ನು ತೆಗೆದುಕೊಂಡು ಅಲ್ಲಿ ಹೋಗಿದ್ದರು.

ಡಾ. ದೇಸಾಯಿಯವರು ತಮ್ಮ ಬಾಲಿದ್ವೀಪದ ಪ್ರಯಾಣದ ಬಗ್ಗೆ ಈ ರೀತಿ ಬರೆದಿದ್ದಾರೆ. "ನಾನು ಪೆನಾಂಗ ದೇಶದಲ್ಲಿ ಉದ್ಯೋಗವನ್ನು ಮಾಡುತ್ತಿದ್ದೆ. ಅಲ್ಲಿ ಪುಸ್ತಕವನ್ನು ಓದುತ್ತಿದ್ದಾಗ 'ಬಾಲಿದ್ವೀಪದಲ್ಲಿ ರಾಮಾಯಣ ಹಾಗೂ ಚಾತುರ್ವರ್ಣ' ಎಂಬ ವಿಷಯ ದೃಷ್ಟಿಗೋಚರವಾಯಿತು. ತಕ್ಷಣವೇ ಬಾಲಿದ್ವೀಪದ ಬಗ್ಗೆ ಜಿಜ್ಞಾಸೆ ಉಂಟಾಯಿತು. ಹಾಗೂ ಅದರ ಅನ್ವೇಷಣೆ ಮಾಡಬೇಕೆಂಬ ಸಂಕಲ್ಪವನ್ನು ಮಾಡಿದೆ. ೧೯೧೨ ಮೇ ಮಾಸದಲ್ಲಿ ಬಾಲಿದ್ವೀಪಕ್ಕೆ ಪ್ರಸ್ಥಾನ ಮಾಡಿದೆ. ಮೊದಲು ಜಾವಾದ್ವೀಪದ ಸುರ್ಬಜಾ ಬಂದರಿನಲ್ಲಿ ತಂಗಿದೆ. ಇಲ್ಲಿಂದಲೇ ಬಾಲಿದ್ವೀಪಕ್ಕೆ ಜಹಜು ಹೊರಡುತ್ತದೆ."

ಡಾ. ದೇಸಾಯಿಯವರು ಸುರ್ಬಜಾದಲ್ಲಿ ಬಾಲಿದ್ವೀಪ ನಿವಾಸಿಗಳಾದ ಹಿಂದುಗಳನ್ನು ಕಂಡುಹಿಡಿಯಲು ಯತ್ನಿಸಿದರು. ಆದರೆ ಯಾರೂ ಸಿಗಲಿಲ್ಲ. ಕೊನೆಗೆ ಜಾವಾದ್ವೀಪಕ್ಕೆ ವ್ಯಾಪಾರಕ್ಕಾಗಿ ಬಂದ ಭಾರತೀಯ ಮುಸ್ಲಿಮನೋರ್ವನು ಸಿಕ್ಕಿದನು. ಅವನು ಬಾಲೀದ್ವೀಪದ ಬುಲೇಲಾಂಗ್‌ನ ನಿವಾಸಿಯಾಗಿದ್ದ. ಬಾಲಿಯಲ್ಲಿ ಶಿಕ್ಷಿತ ಬ್ರಾಹ್ಮಣರು ಇರುವರೆಂದೂ ಅವರನ್ನು ಪಂಡಾ ಎಂದು ಹೇಳುವ ವಿಷಯ ಅವನಿಂದ ತಿಳಿದುಬಂತು. ಹಾಗ ಆ ದ್ವೀಪದ ಒಂದು ಬಂದರವಾದ 'ಕರಂಗ್ ಆಸೇಮ್'ನಲ್ಲಿ ಒಬ್ಬ ಹಿಂದು ರಾಜನಿದ್ದಾನೆಂಬ ವಿಚಾರ ತಿಳಿದು ಬಂತು. ಕೂಡಲೇ ಹಡಗನ್ನೇರಿ ಬಾಲಿಗೆ ತೆರಳಿ ಎರಡು ದಿನ ಪ್ರಯಾಣ ಮಾಡಿದ ನಂತರ ಪ್ರಾತಃಕಾಲ ೯ ಗಂಟೆಗೆ ಹಡಗು ಕರಂಗ ಅಸೇಮನ್ನು ಸೇರಿತು. ಮರುದಿನ ತನ್ನ ಮುಸ್ಲಿಂ ಪಥ ಪ್ರದರ್ಶಕ (Guide) ನೊಂದಿಗೆ ಕೆಲವು ಪಂಡರ ಮನೆಗೆ ಹೋಗಿ ಅವರ ಬಳಿ ಇರುವ ಗ್ರಂಥಗಳನ್ನು ಅವಲೋಕಿಸಿದರು. ಆದರೆ ಗ್ರಂಥಗಳು ದೇವನಾಗರೀ ಲಿಪಿಯಲ್ಲಿರದೆ ಕವಿಭಾಷೆಯ ಲಿಪಿಯಲ್ಲಿದ್ದವು. ಅಲ್ಲಿಂದ ರಾಜಪ್ರಸಾದಕ್ಕೆ ತೆರಳಿದರು. ರಾಜನು ಆದರಾತಿಥ್ಯ ಮಾಡಿ, ಭಾರತದ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳಿದನು. ಡಾ. ದೇಸಾಯಿಯವರು ಮೂರು ದಿವಸಗಳವರೆಗೆ ಅಲ್ಲಿಯೇ ಇದ್ದರು. ಮೊದಲು ಅನೇಕ ಪ್ರಾಚೀನ ಗ್ರಂಥಗಳು ಇದ್ದವು. ಈಗ ಅಲ್ಲಿಲ್ಲ. ಕೇವಲ ಧಾರ್ಮಿಕ ಕಥೆಗಳು ಅಲ್ಲಿಯ ಭಾಷೆಯಲ್ಲಿಯೇ ಬರೆದಿದ್ದಾರೆ. ದೇಸಾಯಿಯವರಿಗೆ ನಿರಾಶೆಯಾಯಿತು. ಅಷ್ಟರಲ್ಲಿಯೇ ರಾಜಪುತ್ರನು ಡಾ. ದೇಸಾಯಿಯವರನ್ನು ಬರಹೇಳಿ ಅವರೊಡನೆ ಭಾರತದಲ್ಲಿ ಮಹಾಭಾರತದ ಎಲ್ಲಾ ಪರ್ವಗಳೂ ದೊರೆಯುತ್ತವೆಯೋ? ಎಂದು ಕೇಳಿದನು. ಅದಕ್ಕೆ ಅವರು 'ಹೌದು' ಎಂದು ಉತ್ತರಿಸಲು, ರಾಜಪುತ್ರನು ಪುಸ್ತಕಾಲಯದಿಂದ ಭೀಷ್ಮ ಪರ್ವವನ್ನು ತರಿಸಿದನು. ಅದನ್ನು ಮರದಪೆಟ್ಟಿಗೆಯಲ್ಲಿ ಸುರಕ್ಷಿತವಾಗಿಡಲಾಗಿತ್ತು. ೧೪ ಅಂಗುಲ ಉದ್ದ ಎರಡೂವರೆ ಅಂಗುಲ ಅಗಲವಿರುವ ತಾಳೆಗರಿ (ತಾಡಪತ್ರ)ಯಲ್ಲಿ ಬರೆಯಲಾಗಿತ್ತು. ಡಾ. ದೇಸಾಯಿಯವರಿಗೆ ಕೂಡಲೇ ಭೀಷ್ಮಪರ್ವದಲ್ಲಿಯೇ ಭಗವದ್ಗೀತೆ ಇರುವ ವಿಷಯ ನೆನಪಿಗೆ ಬಂತು. ಅಲ್ಲಿಯವರು ಭಗವದ್ಗೀತೆಯಿಂದ ಸರ್ವಥಾ ಅಪರಿಚಿತರಾಗಿದ್ದರು. ಬಹಳ ಸಮಯದ ತನಕ ಹುಡುಕಿದ ಬಳಿಕ ಗೀತೆಯ ಕೆಲವು ಶ್ಲೋಕಗಳು ದೃಷ್ಟಿಗೋಚರವಾದವು. ಡಾ. ದೇಸಾಯಿಯವರಿಗೆ ಇದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಅಲ್ಲಿಯ ಭೀಷ್ಮಪರ್ವದಲ್ಲಿರುವ ಗೀತೆಯಲ್ಲಿ ೧೮ ಅಧ್ಯಾಯಗಳಿರದೆ ಕೇವಲ ಒಂದು ಅಧ್ಯಾಯವಿತ್ತು. ಅಲ್ಲಿಯ ಸರ್ವಶ್ರೇಷ್ಠ ವಿದ್ವಾಂಸರಾದ ಪಂಡಿತ ಪಡಂಡಾ ಬಯಾನ್ ಪಿಡಾಡ್‌ರವರ ಮೂಲಕ ಓದಿಸಿ ಗೀತೆಯ ಶ್ಲೋಕಗಳನ್ನು ಬರೆದುಕೊಂಡರು. ಶ್ರೀ ಡಾ. ದೇಸಾಯಿಯವರು ತಮ್ಮ ಲೇಖನದಲ್ಲಿ ಪ್ರಕಟಿಸಿವುದೇನೆಂದರೆ ಆ ಬಾಲಿ ದ್ವೀಪದ ಗೀತೆಯಲ್ಲಿ ಕೆಳಗಿನ ವಿಶೇಷತೆಗಳಿವೆ ಎಂದಿರುವರು:

೧. ಈ ಗೀತೆಯು 'ಧರ್ಮಕ್ಷೇತ್ರೇ' ಈ ಶ್ಲೋಕದಿಂದ ಆರಂಭವಾಗದೆ 'ದೃಷ್ಟ್ವೇಮಂ ಸ್ವಜನಂ' ಈ ಶ್ಲೋಕದಿಂದ ಆರಂಭವಾಗುತ್ತದೆ.

೨. ಇದರಲ್ಲಿ ಎಲ್ಲಾ ಶ್ಲೋಕಗಳೂ ಒಂದೇ ಅಧ್ಯಾಯದಲ್ಲಿವೆ; ಬೇರೆ ಬೇರೆ ಅಧ್ಯಾಯಗಳಲ್ಲಿಲ್ಲ.

೩. ೭೦೦ ಶ್ಲೋಕಗಳ ಬದಲಿಗೆ ೭೦ಶ್ಲೋಕಗಳು ಮಾತ್ರವಿವೆ.

೪. ಬಾಲೀ ದ್ವೀಪದ ಹಿಂದುಗಳ ಮತಾನುಸಾರ ೧೪೭೮ರಲ್ಲಿ ಜಾವಾ ದ್ವೀಪದ ಮೇಲೆ ಮುಸ್ಲಿಮರ ಧಾಳಿಯಾಯಿತು. ಆ ಸಮಯದಲ್ಲಿ ಬಾಹುರಾಹು (Wahu-Rahu) ಎಂಬ ಬ್ರಾಹ್ಮಣನು ತನ್ನ ಧರ್ಮದ ರಕ್ಷಣೆಗೋಸ್ಕರ ಕೆಲವೊಂದು ಧಾರ್ಮಿಕ ಪುಸ್ತಕಗಳನ್ನು ತನ್ನೊಂದಿಗೆ ತೆಗೆದುಕೊಂಡು ಬಾಲೀದ್ವೀಪಕ್ಕೆ ಓಡಿಹೋದನು. ಇಲ್ಲಿರುವ ಮಹಾಭಾರತ ದಲ್ಲಿ ಕೇವಲ ಎಂಟು ಪರ್ವಗಳಿವೆ. (ಆದಿ, ವಿರಾಟ್, ಮೊಸಲ, ಅಸ್ಥಾನಿಕ, ಸ್ವರ್ಗಾರೋಹಣ, ಉದ್ಯೋಗ

ಮತ್ತು ಆಶ್ರಮವಾಸೀ) ಇನ್ನುಳಿದ ಪರ್ವಗಳು ಜಾವಾದ್ವೀಪದಲ್ಲಿಯೇ ಇವೆ.

ಎಪ್ಪತ್ತು ಶ್ಲೋಕಗಳುಳ್ಳ ಗೀತೆಯನ್ನೇ ಏಕೆ ಪ್ರಾಚೀನವೆಂದು ತಿಳಿದುಕೊಳ್ಳಬೇಕು?

'ಪಾಟಲೀಪುತ್ರ' ಸಮಾಚಾರ ಪತ್ರಿಕೆಯ ಸಂಪಾದಕರಾದ ಶ್ರೀ ಕಾಶೀಪ್ರಸಾದ ಜಾಯಸವಾಲ ಎಂ.ಎ. ಬ್ಯಾರಿಸ್ಟರ್ ಎಟ್‌ಲಾ ಇವರು ೭೦ ಶ್ಲೋಕಗಳಿರುವ ಗೀತೆಯನ್ನು ಪ್ರಕಟಣೆ ಮಾಡುತ್ತಾ ತಮ್ಮ ವಿಚಾರವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ. "ಈ ಪ್ರಾಚೀನ ಗೀತಾಪ್ರತಿಯ ಎಲ್ಲಾ ಶ್ಲೋಕಗಳನ್ನು ಒಟ್ಟಿಗೆ ಓದುವುದರಿಂದ ವಿಷಯ ಭಂಗವಾಗುವುದಿಲ್ಲ. ಗೀತೆಯ ಮೂಲಸಿದ್ಧಾಂತವು ಈ ಎಪ್ಪತ್ತು ಶ್ಲೋಕಗಳಲ್ಲಿಯೇ ಅಡಗಿದೆ. ವಿಶ್ವರೂಪದರ್ಶನದ ಬಗ್ಗೆ ಅನೇಕ ಸ್ತುತಿ ಪರಕ ಶ್ಲೋಕಗಳ ಬದಲಿಗೆ ಒಂದೇ ನಮಸ್ಕಾರ ಶ್ಲೋಕವಿದೆ ಮತ್ತು ವಿಶ್ವರೂಪ ಚಿತ್ರಣದಲ್ಲಿ ಕೇವಲ ಮೂರು ಶ್ಲೋಕಗಳಿವೆ. ಭಕ್ತಿಯೋಗಕ್ಕೆ ಸಂಬಂಧಿಸಿದ ಎರಡೇ ಶ್ಲೋಕ ಗಳಿವೆ. ಇವೇ ಅಂತಿಮ ಶ್ಲೋಕಗಳಾಗಿವೆ."

ಬಾಲಗಂಗಾಧರ ತಿಲಕರು 'ಗೀತಾರಹಸ್ಯ'ದಲ್ಲಿ ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ. "ಪಾಠಕರು ಸ್ಮರಣೆಯಲ್ಲಿಡಬೇಕಾದ ಮುಖ್ಯ ವಿಷಯವೇನೆಂದರೆ ಗೀತೆ ಮತ್ತು ಮಹಾಭಾರತದಲ್ಲಿ ಕ್ರಮೇಣ ಪರಿವರ್ತನೆಗಳಾದವು. ವರ್ತಮಾನದಲ್ಲಿ ಪ್ರಾಪ್ತವಾಗುವ ಗೀತೆ ಮತ್ತು ಮಹಾಭಾರತಗಳು ಮೂಲಗ್ರಂಥಗಳಲ್ಲ."

ತಿಲಕರ ಮತಾನುಸಾರ ಈ ಗೀತೆಯು ಬಾಲಿ ಮತ್ತು ಜಾವಾ ದ್ವೀಪದಲ್ಲಿ ವಿಕ್ರಮ ಸಂವತ್ ೫೩೫ರಲ್ಲಿತ್ತು. ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಭಾರತದಿಂದ ಜಾವಾ ದ್ವೀಪಕ್ಕೆ ಗೀತೆ ಮತ್ತು ಮಹಾಭಾರತ ಸಾಧಾರಣ ೨೦೦೦ ವರ್ಷಗಳ ಮೊದಲೇ ಹೋಗಿರಬೇಕು. ಅಲ್ಲಿ ಅದು ತನ್ನ ನಿಜವಾದ ಸ್ವರೂಪದಲ್ಲೇ ಸುರಕ್ಷಿತವಾಗಿತ್ತು. ಭಾರತದಲ್ಲಿ ಕ್ರಮೇಣ ಪರಿವರ್ತನೆಗಳಾದವು.

ಮೂಲಸ್ವರೂಪವನ್ನು ಕಳೆದುಕೊಂಡು. ಬೃಹತ್ಸ್ವ ರೂಪವನ್ನು ತಾಳಿದ ಮಹಾಭಾರತದ ಭೀಷ್ಮಪರ್ವದಲ್ಲಿ ಗೀತಾ ಶ್ಲೋಕಗಳ ಬಗ್ಗೆ ಈ ರೀತಿ ವರ್ಣನೆ ಇದೆ.

**ಷಟ್ ಶತಾನಿ ಚ ವಿಂಶಾನಿ ಶ್ಲೋಕಾನಾಂ ಪ್ರಾಹಕೇಶವಃ।**
**ಅರ್ಜುನ ಸಪ್ತಪಂಚಾಶತ್ ಸಪ್ತಂಷಷ್ಟಿಂತು ಸಂಜಯಃ।**
**ಧೃತರಾಷ್ಟ್ರ ಶ್ಲೋಕ ಮೇಕಂ ಗೀತಾಯಾ ಮಾನಮುಚ್ಯತೇ ॥**

*(ಮಹಾಭಾರತ ಭೀಷ್ಮಪರ್ವ ೪೩-೪-೫)*

ಶ್ರೀಕೃಷ್ಣನು ೬೨೦ ಶ್ಲೋಕಗಳನ್ನೂ ಅರ್ಜುನನು ೫೭ ಶ್ಲೋಕಗಳನ್ನೂ, ಸಂಜಯನು ೬೭ ಶ್ಲೋಕಗಳನ್ನೂ ಧೃತರಾಷ್ಟ್ರ ಒಂದು ಶ್ಲೋಕವನ್ನೂ ಹೇಳಿದ್ದಾರೆ.

ಈ ರೀತಿ ಗೀತೆಯಲ್ಲಿರುವ ಶ್ಲೋಕಗಳ ಸಂಖ್ಯೆ ೭೪೫ ಎಂದು ತಿಳಿದುಬರುತ್ತದೆ. ಆದರೆ ಶ್ರೀ ಶಂಕರಾಚಾರ್ಯರು ಕೇವಲ ೭೦೦ ಶ್ಲೋಕಗಳ ಮೇಲೆ ಭಾಷ್ಯವನ್ನು ಮಾಡಿದ್ದಾರೆಂದರೆ ಅದರ ಮತಾನುಸಾರ ಉಳಿದ ೪೫ ಶ್ಲೋಕಗಳು ಪ್ರಕ್ಷಿಪ್ತವೆಂದಾಯಿತು. ವಿಮರ್ಶಕರು ಇದನ್ನು ಪರಿಶೀಲಿಸಲಿ.

ಟಿಪ್ಪಣಿ : ಯಾವ ಭೀಷ್ಮ ಪರ್ವದಲ್ಲಿ ಗೀತಾ ಶ್ಲೋಕಗಳ ವಿವರಣೆಯಂತೆ ಧೃತರಾಷ್ಟ್ರ-೧; ಸಂಜಯ-೬೭; ಅರ್ಜುನ-೫೭, ಶ್ರೀಕೃಷ್ಣ-೬೨೦ ಕೂಡ ೭೪೫. ಇದಕ್ಕೆ ವಿರುದ್ಧವಾಗಿ ಪ್ರಚಲಿತ ನಾವು ಕಾಣುವ ಗೀತೆಯಲ್ಲಿ ಸಂಜಯನ ೬೭ ಶ್ಲೋಕದ ಬದಲಿಗೆ ೩೯ ॥ ಅರ್ಜುನನ ೫೭ ಶ್ಲೋಕದ ಬದಲಿಗೆ ೮೩ ॥, ಶ್ರೀಕೃಷ್ಣನ ೬೨೦ ಶ್ಲೋಕದ ಬದಲಿಗೆ ೫೭೬, ಧೃತರಾಷ್ಟ್ರ-೧ ಕೂಡ ೭೦೦ ಈ ರೀತಿಯ ಬದಲಾವಣೆಗೆ ಯಾವುದೇ ಕಾರಣ ಮತ್ತು ಆಧಾರವೂ ಸಿಗುವುದಿಲ್ಲ, ಈ ೭೦೦ ಶ್ಲೋಕಗಳಲ್ಲಿ ಧೃತರಾಷ್ಟ್ರನು ಕೇಳಲಾದ ೧ ಪ್ರಶ್ನೆ ತನ್ನವರಿಗೂ, ಪಾಂಡವರಿಗೂ ಆಗುವ ಯುದ್ಧದಲ್ಲಿ ಏನು ನಡೆಯಿತು? ಎಂಬ ಕುತೂಹಲ ವ್ಯಕ್ತವಾಗುತ್ತದೆ. ಸಂಜಯನ ೩೯ ॥ ಅರ್ಜುನ ೮೩ ॥ ಕೂಡ ೧೨೪ ಶ್ಲೋಕಗಳಂತೂ ಗೀತೋಪದೇಶವಲ್ಲ. ಗೀತೋಪದೇಶ ಪ್ರಾರಂಭವಾಗುವುದು ೨ನೇ ಅಧ್ಯಾಯದ ೨ನೇ ಶ್ಲೋಕದಿಂದ ಅರ್ಜುನನ ವಿಷಾದದ ಬಗ್ಗೆ ವಿವರಿಸಲಾದ ೨೧ ॥ ಶ್ಲೋಕಗಳನ್ನು ಬಿಟ್ಟರೆ ಕೃಷ್ಣನೊಡನೆ ಪ್ರಶ್ನಿಸಿದ ಶ್ಲೋಕಗಳು ೬೨ ಮಾತ್ರ. ಈ ೬೨ ಪ್ರಶ್ನೆಗಳಿಗೆ ಶ್ರೀಕೃಷ್ಣನು ೫೭೬ ಶ್ಲೋಕಗಳ ಮೂಲಕ ಬೋಧಿಸಿದನೇ? ಎಂಬುದು ಸಂದೇಹಾಸ್ಪದ ವಿಷಯವಾಗಿದೆ. ಏಕೆಂದರೆ ಹತ್ತನೇ ಅಧ್ಯಾಯ ೩೭ನೇ ಶ್ಲೋಕದಲ್ಲಿ 'ಪಾಂಡವಾನಾಂ ಧನಂಜಯಃ' ಪಾಂಡವರಲ್ಲಿ ನಾನೇ ಅರ್ಜುನ ಎಂಬುದಾಗಿ ಕೃಷ್ಣನು ಹೇಳಿಕೊಳ್ಳುತ್ತಾನೆ. ಈ ಕೃಷ್ಣಾರ್ಜುನರು ಒಂದೇ ದೇಹದ ಎರಡು ಮುಖಗಳಂತಿದ್ದಾರೆ. ಇದಲ್ಲದೆ ಇವರನ್ನು ನರ-ನಾರಾಯಣರೆಂದೇ ಹೇಳಲಾಗಿದೆ. ಅರ್ಜುನನು ೬೨ ಪ್ರಶ್ನೆಗಳನ್ನು ಕೇಳಿದ್ದಾಗಲಿ ಶ್ರೀಕೃಷ್ಣನು. ೫೭೬ ಶ್ಲೋಕಗಳ ಮೂಲಕ ಉತ್ತರಿಸಿದ್ದಾಗಲಿ ಸತ್ಯಕ್ಕೆ ವಿರೋಧವಾದುದೆಂದು 'ಕೃಷ್ಣನೂ ಪಾಂಡವರೂ ಒಂದೇ' ಎಂಬ ಕಾರಣದಿಂದ ವ್ಯಕ್ತವಾಗುವುದು. ಮೋಹಪರವಶನಾಗಿ ಯುದ್ಧ ಮಾಡಲಾರೆನೆಂದು ಹೇಳಿದ ಅರ್ಜುನನಿಗೆ ಕೆಲವೇ ಶ್ಲೋಕಗಳ ಮೂಲಕ ಅವನ ಸಂದೇಹ ಪರಿಹಾರ ಮಾಡಿ ಅರ್ಜುನನ್ನು ಯುದ್ಧ ಸನ್ನದ್ಧನನ್ನಾಗಿ ಮಾಡುವುದೇ ಕೃಷ್ಣನ ಕೆಲಸವಾಗಿತ್ತು. ಇಷ್ಟು

ದೀರ್ಘವಾದ ಸಂಭಾಷಣೆ ಸಮರ ಭೂಮಿಯಲ್ಲಿ ಅನಗತ್ಯ ಮತ್ತು ಅಪ್ರಾಸಂಗಿಕ ಎಂಬುದನ್ನು ಅನೇಕ ವಿಮರ್ಶಕಾರರು ಹೇಳುತ್ತಿರುವುದು ಸತ್ಯವೆಂದು ತೋರುತ್ತದೆ. ಆದರೂ ಬಾಲಿ ದ್ವೀಪದಲ್ಲಿ ಸಿಕ್ಕಿದೆಯೆನ್ನಲಾದ ೭೦ ಶ್ಲೋಕಗಳ ಗೀತೆಯಲ್ಲಿ ಬಂದಿರುವ ವಿಚಾರಗಳೆಲ್ಲವೂ ವಿಸ್ತಾರವಾಗಿ ೭೦೦ ಶ್ಲೋಕಗಳಷ್ಟು ಸುದೀರ್ಘವಾಗಿ ಹೇಳಿದ್ದನ್ನು ನೋಡುವಾಗ ೭೦ ಶ್ಲೋಕಗಳ ವಿಸ್ತೃತ ವಾಖ್ಯೆ ಎಂಬುದು ನಿಶ್ಚಿತವಾಗುತ್ತದೆ. ಆ ೭೦ ಶ್ಲೋಕಗಳು ಯಾವುದೆಂಬುದನ್ನೂ, ಅವುಗಳು ೭೦೦ ಶ್ಲೋಕಗಳ ವಿಸ್ತೃತ ಗೀತೆಯ ಯಾವ ಯಾವ ಅಧ್ಯಾಯದಲ್ಲಿ ಎಲ್ಲೆಲ್ಲಿ ಬಂದಿದೆ ಎಂಬುದನ್ನೂ ಈ ಕೆಳಗೆ ಕೊಟ್ಟಿರುತ್ತೇವೆ.

## ಪ್ರಾಚೀನ ಭಗವದ್ಗೀತಾ

(೭೦೦ರ ಬದಲಿಗೆ ೭೦ ಶ್ಲೋಕಗಳು)

**ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಮ್ ।**
**ನ ಚ ಶ್ರೇಯೋನು ಪಶ್ಯಾಮಿಹತ್ವಾ ಸ್ವಜನಮಾಹವೇ ।**
**ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ ॥೧॥**

*(ಗೀತಾ : ೧–೨೮;೩೧;೩೨)*

ಅರ್ಥ : ಹೇ ಕೃಷ್ಣ! ನನ್ನ ಪರಿವಾರದವರು ಬಾಂಧವರು, ಯುದ್ಧ ಮಾಡುವ ಇಚ್ಛೆಯಿಂದ ಇಲ್ಲಿ ನೆರೆದಿರುವುದನ್ನು ಕಂಡು (ನನಗೆ ಬಹಳ ದುಃಖವಾಗುತ್ತಿದೆ) (ಏಕೆಂದರೆ) ಸ್ವಜನರನ್ನು ಸಂಹರಿಸುವುದರಲ್ಲಿ ನನಗೆ ಕಲ್ಯಾಣವು ಕಂಡುಬರುವುದಿಲ್ಲ. ಹೇ ಕೃಷ್ಣ! ಈ ರೀತಿಯ ವಿಜಯ, ರಾಜ್ಯ ಮತ್ತು ಸುಖದ ಆಕಾಂಕ್ಷೆ ನನಗೆ ಲೇಶಮಾತ್ರವೂ ಇಲ್ಲ.

**ಯದಿ ಮಾಮ ಪ್ರತಿಕಾರಮಶಸ್ತ್ರಂ ಶಸ್ತ್ರ – ಪಾಣಯಃ ।**
**ಧಾರ್ತರಾಷ್ಟ್ರಾ ರಣೇ ಹನ್ಯುಸ್ತನ್ಮೇ ಕ್ಷೇಮತರಂ ಭವೇತ್ ॥೨॥**

*(ಗೀತಾ: ೧–೪೬)*

ಅರ್ಥ : ಬದಲಿಗೆ ನಾನು ಸ್ವತಃ ದ್ವೇಷಿಸುವವನಾಗಬಾರದು ಮತ್ತು ಇತರರ ಹತ್ಯೆಗೆ ಶಸ್ತ್ರಪಾಣಿಯಾಗಲಾರೆ. ಅಂತಹ ಸ್ಥಿತಿಯಲ್ಲಿ ಧಾರ್ತರಾಷ್ಟ್ರರು (ದುರ್ಯೋಧನಾದಿಗಳು) ನನ್ನ ಹತ್ಯೆಯನ್ನು ಮಾಡುವವರಾದರೆ, ಆಗಲೂ ನನ್ನ ಕಲ್ಯಾಣವಾದೀತು.

**ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।**
**ಕ್ಷುದ್ರಂ ಹೃದಯಂ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥೩॥**

*(ಗೀತಾ: ೨.೩)*

(ಸಂಗತಿ : ಅರ್ಜುನನ ವಚನವನ್ನು ಕೇಳಿ ಶ್ರೀಕೃಷ್ಣನು ಈ ರೀತಿ ಉತ್ತರಿಸಿದನು)

ಅರ್ಥ : ಹೇ ಪಾರ್ಥ! ನಿರ್ವೀರ್ಯನಾಗಬೇಡ. ನಿನಗೆ ಇದು ಶೋಭಿಸುವುದಿಲ್ಲ. ಶತ್ರುಗಳಿಗೆ ಸಂತಾಪವನ್ನು ಕೊಡುವವನೇ! ಅಂತಃಕರಣದ ಈ ಕ್ಷುದ್ರವಾದ ದುರ್ಬಲತೆ ಯನ್ನು ತ್ಯಜಿಸಿ, ಯುದ್ಧಕ್ಕೆ ಸನ್ನದ್ಧನಾಗು.

**ಅಶೋಚ್ಯಾನನ್ವ ಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।**
**ಗತಾಸೂ ನಗತಾಸೂಂಶ್ಚ ನಾನು ಶೋಚಂತಿ ಪಂಡಿತಾಃ ॥೪॥**

*(ಗೀತಾ: ೨.೧೧)*

(ಸಂಗತಿ: ಅಂತಃಕರಣದ ದುರ್ಬಲತೆ ಏನೆಂದು ಹೇಳುತ್ತಾನೆ.)

ಅರ್ಥ : ಹೇ ಅರ್ಜುನ! ಯಾರ ಬಗ್ಗೆ ಶೋಕಿಸಬಾರದೋ ಅವರ ಬಗ್ಗೆ ನೀನು ಶೋಕಿಸುತ್ತೀಯೆ. ನೀನು ಜ್ಞಾನಿಗಳಂತೆಯೇ ಮಾತನಾಡುತ್ತೀಯೆ. (ಆದರೆ ಜ್ಞಾನಿಯಲ್ಲ. ಏಕೆಂದರೆ) ವಿದ್ವಾಂಸರು ಅನ್ಯರ ಪ್ರಾಣ ಪಕ್ಷಿಯು ಹೊರಟು ಹೋಗಲಿ ಅಥವಾ ದೇಹದಲ್ಲಿಯೇ ಇರಲಿ ಆ ಬಗ್ಗೆ ಚಿಂತಿಸುವುದಿಲ್ಲ.

**ದೇಹಿನೋಽಸ್ಮಿನ್ ಯಥಾದೇಹೇ ಕೌಮಾರಂ ಯೌವನಂ ಜರಾ ।**
**ತಥಾ ದೇಹಾಂತರ ಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ ॥**

*(ಗೀತಾ: ೨.೧೩)*

(ಸಂಗತಿ : ಜ್ಞಾನಿಗಳು ಏತಕ್ಕೆ ಚಿಂತಿಸುವುದಿಲ್ಲ ಎಂಬ ವಿಷಯವನ್ನು ವಿವೇಚಿಸಲಾಗುತ್ತದೆ.)

ಅರ್ಥ : ಯಾವ ರೀತಿ ಈ ದೇಹದಲ್ಲಿ ಬಾಲ್ಯ, ಯೌವನ ಮತ್ತು ವೃದ್ಧಾವಸ್ಥೆ ಉಂಟಾಗುತ್ತದೆಯೋ ಅದೇ ರೀತಿ ಜೀವಾತ್ಮನು ಒಂದು ದೇಹದಿಂದ ಹೊರಟು ಇನ್ನೊಂದು ದೇಹವನ್ನು ಪಡೆಯುತ್ತಾನೆ, ಇದನ್ನು ತಿಳಿದು ಜ್ಞಾನಿಗಳು ಯಾರ ಮೃತ್ಯುವಿನ ಬಗ್ಗೆಯೂ ಶೋಕಿಸುವುದಿಲ್ಲ.

**ನಾಸತೋ ವಿದ್ಯತೇ ಭಾವೋ ನಾ ಭಾವೋ ವಿದ್ಯತೇ ಸತಃ ।**
**ಉಭಯೋ ರಪಿ ದೃಷ್ಟೋಽನ್ತಸ್ತ್ವನಯೋಸ್ತತ್ತ್ವದರ್ಶಿಭಿಃ ॥೬॥**

*(ಗೀತಾ ೨.೧೬)*

(ಸಂಗತಿ : ಈ ಪ್ರಪಂಚದಲ್ಲಿ ಸಾಯುವ ಅಂದರೆ ನಾಶವಾಗುವುದನ್ನು ನೋಡುತ್ತಿದ್ದರೂ ಶೋಕ ಪಡಬಾರದು ಎಂಬುದೇಕೆ? ಈ ಪ್ರಶ್ನೆಗೆ ಉತ್ತರವಿಲ್ಲಿದೆ.)

ಅರ್ಥ : ಅಸತ್ (ನಾಸ್ತಿ Non existance) ನಿಂದ ಭಾವ (Existance)ದ ಉತ್ಪತ್ತಿಯಾಗುವುದಿಲ್ಲ. ಮತ್ತು ಸತ್‌ನ ಅಭಾವವು ಆಗುವುದಿಲ್ಲ. ಇವೆರಡರ ಅಂತರವನ್ನು ತತ್ತ್ವದರ್ಶಿಗಳು ಕಂಡು ಹಿಡಿದಿದ್ದಾರೆ.

**ಅಂತವಂತ ಇಮೇ ದೇಹಾಃ ನಿತ್ಯಸ್ಯೋಕ್ತಾ ಶರೀರಿಣಃ ।**
**ಅನಾಶಿನೋಽ ಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ॥೭॥**

*(ಗೀತಾ : ೨.೧೮)*

(ಸಂಗತಿ : ಮೇಲಿನ ಶ್ಲೋಕದಲ್ಲಿ ಬಂದಿರುವ ಸತ್ಯ-ಅಸತ್ಯ ಎಂಬುದರ ತಾತ್ಪರ್ಯವೇನು? ಎಂಬುದನ್ನಿಲ್ಲಿ ತಿಳಿಸಲಾಗಿದೆ)

ಅರ್ಥ : ಈ ದೇಹ (ಅಸತ್ ಆದ ಕಾರಣ) ನಾಶವಾಗು ವಂಥದ್ದಾಗಿದೆ ಮತ್ತು ದೇಹದ ಯಜಮಾನ (ಜೀವಾತ್ಮನು) ಸದಾ (ಸತ್ ಆದ ಕಾರಣ) ನಿತ್ಯ, ಅನಂತ ಎಂದು ಹೇಳಲ್ಪಡುತ್ತಾನೆ. ಹೇ ಭಾರತ! ಅವನು (ಜೀವಾತ್ಮನು) ಅವಿನಾಶಿ ಮತ್ತು ಅಚಿಂತ್ಯನಾಗಿದ್ದಾನೆ. ಆದುದರಿಂದ ಅವನ ನಾಶದ ಬಗ್ಗೆ ಚಿಂತಿಸದೇ ಯುದ್ಧದಲ್ಲಿ ನಿರತನಾಗು.

**ಯ ಏವಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಮ್।**
**ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ ॥೮॥**

*(ಗೀತಾ : ೨-೧೯)*

ಅರ್ಥ : ಯಾವನು ಈ ಜೀವಾತ್ಮನನ್ನು ಸಾಯುವವ ಮತ್ತು ಯಾವನು ಸಾಯಿಸಲ್ಪಡುವವ ಎಂದು ತಿಳಿಯುತ್ತಾರೋ ಇವರಿಬ್ಬರೂ ವಾಸ್ತವಿಕತೆಯನ್ನು ತಿಳಿದವರಲ್ಲ. ಕಾರಣ ಅವನು ಸಾಯುವುದಿಲ್ಲ ಮತ್ತು ಯಾರಿಂದಲೂ ಸಾಯಿಸಲ್ಪಡುವುದೂ ಇಲ್ಲ.

**ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತು ಮರ್ಹಸಿ ।**
**ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋನ್ಯತ್ಕ್ಷತ್ರಿಯಸ್ಯ ನ ವಿದ್ಯತೇ ॥೯॥**

*(ಗೀತಾ: ೨-೩೧)*

ಅರ್ಥ : ತನ್ನ ಧರ್ಮವನ್ನಾದರೂ ವೀಕ್ಷಿಸಿ (ಯುದ್ಧದಿಂದ) ವಿಚಲಿತನಾಗಬಾರದು. (ಏಕೆಂದರೆ) ಕ್ಷತ್ರಿಯನಿಗೆ ಯುದ್ಧಕ್ಕಿಂತ ಮಿಗಿಲಾದ ಧರ್ಮವಿಲ್ಲ.

**ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಮ್ ।**
**ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ ॥೧೦॥**

*(ಗೀತಾ: ೨-೩೭)*

ಅರ್ಥ : ಯುದ್ಧದಲ್ಲಿ ಮಡಿದರೆ ಸ್ವರ್ಗವನ್ನು ಪಡೆಯುವೆ. ವಿಜಯಿಯಾದರೆ ರಾಜ್ಯಭೋಗವನ್ನು ಹೊಂದುವೆ. ಆದುದರಿಂದ ಹೇ ಕೌಂತೇಯ! ಏಳು ಯುದ್ಧ ಮಾಡಲು ಸನ್ನದ್ಧನಾಗು.

**ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ ।**
**ಮಾ ಕರ್ಮ ಫಲ ಹೇತುರ್ಭೂರ್ಮಾತೇ ಸಂಗೋಸ್ತ್ವ ಕರ್ಮಣೀ ॥೧೦॥**

*(ಗೀತ : ೨-೪೭)*

ಅರ್ಥ : ಕರ್ಮ ಮಾಡಲು ಮಾತ್ರ ನಿನಗೆ ಅಧಿಕಾರವಿದೆ. ಫಲವನ್ನು ಭೋಗಿಸುವುದರಲ್ಲಿಲ್ಲ. ಕರ್ಮಫಲದ ಕಾರಣೀಭೂತ ನಾಗಬೇಡ (ಫಲವು ಲಭಿಸಲಿ ಎಂಬ ಭಾವನೆಯಿಂದ ಕರ್ಮವನ್ನು ಮಾಡಬೇಡ.) ಹಾಗೂ ಅಕರ್ಮದೊಂದಿಗೆ ಸಂಗತಿಯನ್ನು ಮಾಡಬೇಡ. ಅರ್ಥಾತ್ ಕರ್ಮ ಮಾಡುವುದನ್ನು ಬಿಡಬೇಡ.[೨]

**ಸಿಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ।**
**ಶ್ರುತಿ ವಿಪ್ರತಿ ಪನ್ನಾತೇ ಯದಾ ಸ್ಥಾಸ್ಯತಿ ನಿಶ್ಚಲಾ ।**
**ಸಮಾಧಾವಚಲಾ ಬುದ್ಧಿಸ್ತದಾಯೋಗಮವಾಪ್ಸ್ಯತಿ ॥೧೨॥**

*(ಗೀತಾ : ೨.೪೮.೫೩)*

ಅರ್ಥ : ಸಫಲತೆ ಮತ್ತು ವಿಫಲತೆಯಲ್ಲಿ ಸಮಾನರಾಗಿರ ಬೇಕು. (ಸಫಲತೆಯಿಂದ ಪ್ರಸನ್ನನಾಗಬಾರದು, ವಿಫಲನಾದರೆ ಅತ್ಯಂತ ವ್ಯಾಕುಲನೂ ಆಗಬಾರದು.) ಈ ಸಮತೆಯೇ ಯೋಗಶಿವಾಗಿದೆ. (ನಾನಾ ರೀತಿಯ) ವೇದ ವಾಕ್ಯಗಳಿಂದ ಸಂಶಯ ಗ್ರಸ್ತವಾದ ನಿನ್ನ ಬುದ್ಧಿ ಸಮಾಧಿಯಲ್ಲಿ ಸ್ಥಿರ ಮತ್ತು ನಿಶ್ಚಲವಾದ ಕೂಡಲೇ ನನು ಯೋಗಾವಸ್ಥೆಯನ್ನು ಹೊಂದುವೆ. ಅರ್ಥಾತ್ ಯೋಗಿಯಾಗುವೆ.

**ಪ್ರಜಾಹಾತಿ ಯದಾಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್ ।**
**ಆತ್ಮನ್ಯೇವಾತ್ಮನಾತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥ ೧೩ ॥**

*(ಗೀತಾ :೨-೫೫)*

ಅರ್ಥ : ಹೇ ಪಾರ್ಥ! ಯಾವಾಗ ಯೋಗಿಯು ಮನಸ್ಸಿನಲ್ಲಿ ಮೂಡಿದ ಸಮಸ್ತ ಕಾಮನೆಗಳನ್ನು ತ್ಯಜಿಸುತ್ತಾನೋ ಮತ್ತು ಅದರಿಂದ ಆತ್ಮ ಸಂತುಷ್ಟನಾಗುತ್ತಾನೋ ಆಗಲೇ ಸ್ಥಿತ ಪ್ರಜ್ಞನೆನಿಸಿಕೊಳ್ಳುತ್ತಾನೆ.

**ದುಃಖೇನಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।**
**ವೀತರಾಗ ಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥೧೪॥**

(ಗೀತಾ: ೨-೫೬)

ಅರ್ಥ : ಯಾರ ಮನಸ್ಸು ದುಃಖದಲ್ಲಿ ವ್ಯಾಕುಲ ಗೊಳ್ಳುವುದಿಲ್ಲವೋ ಯಾವನು ರಾಗ, ಭಯ, ಕ್ರೋಧವನ್ನು ಬಿಟ್ಟಿದ್ದಾನೋ ಆ ಮುನಿಯು-ಸ್ಥಿತಧೀಃ-ನಿಶ್ಚಲಬುದ್ಧಿಯುಳ್ಳವ ನಾಗಿರುತ್ತಾನೆ.

**ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।**
**ರಸವರ್ಜಂ ರಸೋಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥೧೫॥**

*(ಗೀತಾ: ೨.೫೯)*

ಅರ್ಥ : ನಿರಾಹಾರಿ ಮನುಷ್ಯನಿಂದ ವಿಷಯ ಭೋಗಗಳು ದೂರವಾಗುತ್ತವೆ. ಆದರೆ ಭೋಗವನ್ನು ಭೋಗಿಸುವ ಲಾಲಸೆ (ಮನಸ್ಸಿನಲ್ಲಿ ಅಪ್ರಾಪ್ತವಾದ ವಸ್ತುವನ್ನು ಪಡೆಯಬೇಕೆಂಬ ಇಚ್ಛೆ) ದೂರವಾಗುವುದಿಲ್ಲ. ಪರಮಾತ್ಮನ ಸಾಕ್ಷಾತ್ಕಾರ ವಾದೊಡನೆಯೇ ಸಮಸ್ತ ಆಕಾಂಕ್ಷೆಗಳೂ ದೂರವಾಗುತ್ತವೆ.

**ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ।**
**ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋಮುನೇಃ ॥೧೬॥**

*(ಗೀತಾ : ೨.೬೯)*

ಅರ್ಥ : ಸರ್ವಸಾಧಾರಣವಾಗಿ ಯಾವುದು ರಾತ್ರಿಯೋ, ಆ ರಾತ್ರಿಯಲ್ಲಿ ಸಂಯಮಿಗಳು (ಪರಮಾತ್ಮ ಸಾಕ್ಷಾತ್ಕಾರ ಮಾಡುವ ಯೋಗಿಗಳು) ಜಾಗ್ರತಾವಸ್ಥೆಯಲ್ಲಿರುತ್ತಾರೆ. ಮತ್ತು ಯಾವಾಗ ಸರ್ವ ಸಾಧಾರಣರು ಜಾಗ್ರತವಸ್ಥೆಯಲ್ಲಿರುತ್ತಾರೋ ಆಗ ಸಂಯಮಿಗಳಿಗೆ ರಾತ್ರಿಯಾಗಿರುತ್ತದೆ.

**ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ।**
**ಪರಸ್ಪರಂ ಭಾವಯಂತಃ ಶ್ರೇಯಃ ಪರಮ ವಾಪ್ಸ್ಯಥಃ ॥೧೭॥**

*(ಗೀತಾ: ೩.೧೧)*

ಅರ್ಥ : ದೇವತೆಗಳನ್ನು (ಯಜ್ಞಾದಿಗಳಿಂದ) ಪ್ರಸನ್ನ ಮಾಡಿದರೆ ಅವುಗಳು ಪ್ರಸನ್ನವಾಗಿ ನಿನ್ನ ಕಲ್ಯಾಣವನ್ನು ಮಾಡುವುವು ಈ ರೀತಿ ಪರಸ್ಪರರನ್ನು ಪ್ರಸನ್ನರನ್ನಾಗಿ ಮಾಡುತ್ತಾ ಪರಮಶಾಂತಿಯನ್ನು ಹೊಂದುವೆ.

**ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವ ಕಿಲ್ಬಿಷೈಃ।**
**ಭುಜಂತೇ ತೇ ತ್ವಘಂ ಪಾಪಾ ಯೇ ಪಚನ್ತ್ಯಾತ್ಮ ಕಾರಣಾತ್ ॥೧೮॥**

*(ಗೀತಾ: ೩.೧೩)*

ಅರ್ಥ : ಯಜ್ಞಾವಶೇಷ ಪದಾರ್ಥಗಳನ್ನು ತಿನ್ನುವ ಸಂತನು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ. ಆದರೂ ಯಾವನು ತನಗೋಸ್ಕರವೇ ಭೋಜನವನ್ನು ಏರ್ಪಡಿಸಿ ಕೊಳ್ಳುವನೋ ಅವನು ತನ್ನ ಪಾಪವನ್ನೇ ತಿನ್ನುತ್ತಾನೆ.

**ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್।**
**ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥೧೯॥**

*(ಗೀತಾ : ೩.೩೫)*

ಅರ್ಥ : ಸ್ವಧರ್ಮ ನಿಕೃಷ್ಟವೆಂದು ಪ್ರತೀತಿಯಾದರೂ ಉತ್ತಮ ರೀತಿಯಲ್ಲಿ ಅನುಷ್ಠಾನಕ್ಕೆ ತಂದ ಬೇರೆ ಧರ್ಮಕ್ಕಿಂತ ಶ್ರೇಷ್ಠವಾಗಿದೆ. ಸ್ವಧರ್ಮದಲ್ಲಿ ಸಾಯುವುದು ಲೇಸು. ಆದರೆ ಪರಧರ್ಮವು ಭಯದಾಯಕವಾಗಿದೆ.[೪]

**ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವಚಾರ್ಜುನ।**
**ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ ಪರಂತಪ ॥೨೦॥**

*(ಗೀತಾ : ೪.೫)*

ಅರ್ಥ : ಹೇ ಅರ್ಜುನ! ನನ್ನ ಮತ್ತು ನಿನ್ನ ಅನೇಕ ಜನ್ಮಗಳು ಕಳೆದು ಹೋಗಿವೆ. ಆ ಜನ್ಮಗಳ ಬಗ್ಗೆ ನಾನು ಬಲ್ಲೆನು. ಆದರೆ ಹೇ ಪರಂತಪ! ನಿನಗೆ ಈ ವಿಷಯ ತಿಳಿದಿಲ್ಲ.

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।**
**ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ।**
**ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಮ್ ॥೨೧॥**

*(ಗೀತಾ. ೪-೭,೮)*

ಅರ್ಥ : ಹೇ ಅರ್ಜುನ! ಯಾವಾಗ ಜಗತ್ತಿನಲ್ಲಿ ಧರ್ಮದ ಗ್ಲಾನಿ ಮತ್ತು ಅಧರ್ಮದ ವೃದ್ಧಿಯಾಗುತ್ತದೋ ಆಗಾಗ ಸಜ್ಜನರ ರಕ್ಷಣೆ ಮತ್ತು ದುಷ್ಟರ ನಾಶವನ್ನು ಮಾಡಲು ನನ್ನನ್ನು ನಾನು ನಿರ್ಮಿಸಿಕೊಳ್ಳುವೆನು.

**ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿತತ್ತ್ವತಃ।**
**ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನಃ।**
**ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ ॥೨೨॥**

*(ಗೀತಾ : ೪-೯-೧೪)*

ಅರ್ಥ : ನನ್ನ (ನನ್ನಂತಹ ಯೋಗಿಗಳು) ಜನ್ಮ ಮತ್ತು ಕರ್ಮ ದಿವ್ಯವಾಗಿದೆ. (ಏಕೆಂದರೆ) ಕರ್ಮಗಳು ನನ್ನನ್ನು ಅಂಟಿಕೊಳ್ಳುವುದಿಲ್ಲ ಮತ್ತು ನಾನು ಪವಿತ್ರನಾಗಿರುವುದರಿಂದ ಅದರಲ್ಲಿ ಸಿಕ್ಕಿ ಬೀಳುವುದಿಲ್ಲ ಇದನ್ನು ಸರಿಯಾಗಿ ತಿಳಿದು ಕೊಂಡವನು ದೇಹತ್ಯಾಗ ಮಾಡಿದ ನಂತರ ಪುನರ್ಜನ್ಮವನ್ನು ಪಡೆಯುವುದಿಲ್ಲ. ಹೇ ಅರ್ಜುನನೇ! ಅವನು ನನ್ನನ್ನು (ಪವಿತ್ರನಾದವನನ್ನೇ) ಪ್ರಾರ್ಥಿಸಿಕೊಳ್ಳುತ್ತಾನೆ.[೫]

**ಕರ್ಮಣ್ಯ ಕರ್ಮ ಯಃ ಪಶ್ಯೇದ ಕರ್ಮಣಿ ಚ ಕರ್ಮಯಃ।**
**ಸ ಬುದ್ಧಿಮಾನ್ಮನುಷ್ಯೇಷು ಸಂಯುಕ್ತಃ ಕೃತ್ಸ್ನ ಕರ್ಮಕೃತ್ ॥೨೩॥**

*(ಗೀತಾ : ೪-೧೮)*

ಅರ್ಥ : ಯಾವನು ಕರ್ಮದಲ್ಲಿ ಅಕರ್ಮವನ್ನೂ ಅಕರ್ಮ ದಲ್ಲಿ ಕರ್ಮವನ್ನು ನೋಡುತ್ತಾನೋ ಅವನೇ ನಿಜವಾದ ಬುದ್ಧಿವಂತನು. ಅವನೇ ಯೋಗಿ ಮತ್ತು ಕರ್ಮಗಳನ್ನು ಯಥಾರ್ಥ ರೀತಿಯಲ್ಲಿ ಮಾಡುವವನು ಆಗಿದ್ದಾನೆ.[೬]

**ಯದೃಚ್ಛಾ–ಲಾಭ–ಸಂತುಷ್ಟೋದ್ವಂದ್ವಾತೀತೋ ವಿಮತ್ಸರಃ।**
**ಸಮಃ ಸಿದ್ಧಾವಸಿದ್ಧಾಚ ಕೃತ್ವಾಪ ನ ನಿಬಧ್ಯತೇ ॥೨೪॥**

*(ಗೀತಾ: ೪-೨೨)*

ಯದೃಚ್ಛಾ (ಅನಾಯಾಸ) ಯಾವುದು ಲಭ್ಯವಾಗುವುದೋ ಅದರಲ್ಲಿಯೇ ಸಂತುಷ್ಟನಾಗುವವನು ದ್ವಂದ್ವ (ಆತಪ-ಶೀತ) ಹರ್ಷ-ಶ್ಲೋಕಗಳಿಂದ ಮುಕ್ತನಾದ ಮತ್ತು ಸಫಲತೆ ಹಾಗೂ ಅಸಫಲತೆಗಳೆರಡರಲ್ಲಿ ಸಮನಾವಸ್ಥೆಯಲ್ಲಿರುವ ಜ್ಞಾನಿಯು ಕರ್ಮಗಳನ್ನು ಮಾಡಿದರೂ ಅವುಗಳ ಪಾಪಪುಣ್ಯದಲ್ಲಿ ಸಿಲುಕುವುದಿಲ್ಲ.

**ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ ।**
**ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯ ತಯಃ ಸಂಶಿತ ವ್ರತಾಃ ॥೨೫॥**

*(ಗೀತಾ: ೪-೨೮)*

ಅರ್ಥ : ಮುನಿಗಳು ಅನೇಕ ವ್ರತಗಳನ್ನು (ಅನೇಕ ಯಜ್ಞಾನುಷ್ಠಾನಗಳನ್ನು) ಮಾಡುತ್ತಾರೆ. ದ್ರವ್ಯ, ಯಜ್ಞ (ಹವನ, ಯಜ್ಞ, ದಾನ, ಪುಣ್ಯ) ತಪಯಜ್ಞ (ಲೋಕ ಕಲ್ಯಾಣಕ್ಕೋಸ್ಕರ ಅನೇಕ ಕಷ್ಟಗಳನ್ನು ತಮ್ಮ ಮೇಲೆ ಹೇರಿಕೊಳ್ಳುವುದು ಮತ್ತು ಸ್ವಾಧ್ಯಾಯ ಅಥವಾ ಜ್ಞಾನಯಜ್ಞ ಇವುಗಳು ಅವರು ಮಾಡು ವಂತಹ ಯಜ್ಞಗಳಾಗಿವೆ.

**ಸರ್ವಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ।**
**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ॥೨೬॥**

*(ಗೀತಾ : ೪-೩೪)*

ಅರ್ಥ : ಹೇ ಪಾಥ! ಎಲ್ಲಾ ರೀತಿಯ ಕರ್ಮಗಳ (ವ್ರತಗಳ) ಪರಿ ಸಮಾಪ್ತಿ ಜ್ಞಾನದಲ್ಲಿ ಆಗುತ್ತದೆ. ಆ ಜ್ಞಾನವನ್ನು ಪಡೆಯುವುದಕ್ಕೋಸ್ಕರ ಜ್ಞಾನಿಗಳಾದ ಗುರುಗಳಿಗೆ ಪ್ರಣಮಿಸಿ ಮತ್ತು ಸೇವೆ ಮಾಡಿ ಪ್ರಸನ್ನಚಿತ್ತರನ್ನಾಗಿ ಮಾಡು ಹಾಗೆ ಮಾಡಿದರೆ ಜ್ಞಾನವನ್ನು ಪಡೆಯುವೆ.

**ಸನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸ ಕರಾವುಭೌ ।**
**ತಯೋಸ್ತು ಕರ್ಮಸನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥೨೭॥**

*(ಗೀತಾ : ೫-೨)*

ಅರ್ಥ : ಸನ್ಯಾಸ ಮತ್ತು ಕರ್ಮ ಇವೆರಡೂ ಕಲ್ಯಾಣ ಮಾಡುವವುಗಳಾಗಿವೆ. ಇವೆರಡರಲ್ಲಿ ಕರ್ಮವು ಸಂನ್ಯಾಸಕ್ಕಿಂತ ಶ್ರೇಷ್ಠವಾಗಿದೆ.[೭]

**ಯೋಗಯುಕ್ತೋ ಮುನಿಬ್ರಹ್ಮ ನಚಿಕೇಣಾದಿ ಗಚ್ಛತಿ ।**
**ಸರ್ವ ಭೂತಾತ್ಮ ಭೂತಾತ್ಮ ಕುರ್ವನ್ನಪಿ ನ ಲಿಪ್ಯತೇ ॥೨೮॥**

*(ಗೀತಾ : ೫-೬;೭)*

ಅರ್ಥ : (ಜ್ಞಾನ) ಯೋಗದಿಂದ ಯುಕ್ತನಾದ ಮುನಿಗೆ ಬ್ರಹ್ಮನು ಬಹುಬೇಗ ಪ್ರಾಪ್ತನಾಗುತ್ತಾನೆ. (ಏಕೆಂದರೆ) ಆ ಮುನಿಯ ದೃಷ್ಟಿ ಪ್ರಾಣಿಮಾತ್ರರಲ್ಲಿ ಆ ಭೂತಾತ್ಮ (ಪರಮಾತ್ಮ)ನನ್ನು ನೋಡುತ್ತದೆ. ಆದುದರಿಂದ ಆ ಜ್ಞಾನಿಯು ಕರ್ಮಗಳನ್ನು ಮಾಡುತ್ತಿದ್ದರೂ ಅದರಲ್ಲಿ ಲಿಪ್ತನಾಗುವುದಿಲ್ಲ.

**ಉದ್ಧರೇದಾತ್ಮನಾತ್ಮನಾಂ ನಾತ್ಮಾನಮವಸಾಧಯೇತ್ ।**
**ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥೨೯॥**

*(ಗೀತಾ: ೬-೫)*

ಅರ್ಥ : ತನ್ನ ಆತ್ಮನನ್ನು ತಾನೇ ಮೇಲಕ್ಕೆತ್ತಬೇಕು (ಉದ್ಧರಿಸಿಕೊಳ್ಳಬೇಕು.) ಆದರೆ ಆತ್ಮನನ್ನು ಎಂದಿಗೂ ಅಧಃಪತನವಾಗಲು ಬಿಡಬಾರದು. ಏಕೆಂದರೆ ಆತ್ಮನೇ ತನ್ನ ಮಿತ್ರನಾಗಿದ್ದಾನೆ ಮತ್ತು ಆತ್ಮನೇ ತನ್ನ ಶತ್ರುವಾಗಿದ್ದಾನೆ.

**ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ ।**
**ಏಕಾಕೀಯತ ಚಿತ್ತಾತ್ಮಾ ನಿರಾಶೀರ ಪರಿಗ್ರಹಃ ॥೩೦॥**

*(ಗೀತಾ : ೬-೧೦)*

ಅರ್ಥ : ಯೋಗಿಯು (ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಲಿಚ್ಛಿಸುವ ಜ್ಞಾನಿ) ಏಕೈಕನಾಗಿದ್ದು ಏಕಾಂತದಲ್ಲಿ ವಾಸಿಸುತ್ತಾ ವಿಷಯಗಳಿಂದ ಮುಕ್ತನಾಗಿ ಪರಿಗ್ರಹ (ಬೇರೆಯವ ರೊಂದಿಗೆ ಸಹಾಯ ಪಡೆಯದೆ) ಮಾಡದೆ ಆತ್ಮ (ಪರಬ್ರಹ್ಮ-ಪರಮಾತ್ಮ)ನೊಂದಿಗೆ ತಾದಾತ್ಮ್ಯವನ್ನು ಹೊಂದಬೇಕು.

**ಸಮಂ ಕಾಯ ಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ ।**
**ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಾಶ್ವಾನವ ಲೋಕಯನ್ ।**
**ಯಥಾದೀಪೋ ನಿವಾತಸ್ಥೋ ನೇಗತೇಸೋಪಮಾ ಸ್ಮೃತಾ ॥೩೧॥**

*(ಗೀತಾ : ೬-೧೩;೧೯)*

ಅರ್ಥ : (ಆ ಯೋಗಿಯು ಆಸನಸ್ಥನಾಗಿ ಅಚಲನಾಗಿರ ಬೇಕು) ಸಂಪೂರ್ಣ ಶರೀರ ಮತ್ತು ಕಂಠ ನೇರವಾಗಿರಬೇಕು. ಅಚಲವಾಗಿದ್ದು ಸ್ಥಿರವಾಗಿರಬೇಕು. ಬೇರೆ ಯಾವ ಕಡೆಗೂ ಗಮನಕೊಡದೆ ಕೇವಲ ನಾಸಿಕಾಗ್ರವನ್ನು ನೋಡುತ್ತಾ (ಓಂ, ನ ಜಪ ಮತ್ತು ಪ್ರಾಣಾಯಾಮವನ್ನು ಮಾಡುತ್ತಿರಬೇಕು) ಯಾವ ರೀತಿ ಗಾಳಿ ಬೀಸದಿದ್ದಾಗ ದೀಪದ (ಶಿಖೆ) ಕುಡಿ ನಿಶ್ಚಲ ವಾಗಿರುತ್ತದೋ ಅದೇ ರೀತಿ ಶರೀರ ಸ್ಥಿರವಾಗಿರಬೇಕು.

**ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿಯೋಽರ್ಜುನ ।**
**ಸುಖಂ ವಾ ಯದಿವಾ ದುಃಖಂ ಸ ಯೋಗಿ ಪರಮೋ ಮತಃ ॥೩೨॥**

*(ಗೀತಾ : ೬-೩೨)*

ಅರ್ಥಃ ಹೇ ಅರ್ಜುನ! ಯಾವನು ಸರ್ವತ್ರ ಸರ್ವರನ್ನೂ ತನ್ನಂತೆಯೇ ಸುಖಿ ಯಾ ದುಃಖಿಗಳನ್ನಾಗಿ ನೋಡುತ್ತಾನೋ ಅವನೇ ಪರಮ ಯೋಗಿ ಎಂದು ಹೇಳಲ್ಪಡುತ್ತಾನೆ.

**ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂಚ ಮಯಿ ಪಶ್ಯತಿ ।**
**ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥೩೩॥**

*(ಗೀತಾ : ೬-೩೦)*

ಅರ್ಥ : ಯಾವನು ನನ್ನನ್ನು (ಪರಮಾತ್ಮನನ್ನು) ಸರ್ವತ್ರ ಹಾಗೂ ಸರ್ವರಲ್ಲಿ ನೋಡುತ್ತಾನೋ ಅವನ ನಾಶವನ್ನು ನಾನು ಮಾಡುವುದಿಲ್ಲ. ಅವನು ನನ್ನನ್ನು ಎಂದಿಗೂ ಮರೆಯಲಾರ.

**ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।**
**ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿ ರಷ್ಟಧಾ ।**
**ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯ ಸ್ತಥಾ ॥೩೪॥**

*(ಗೀತಾ : ೭-೪;೬)*

ಅರ್ಥ : ನನ್ನ (ಪರಮಾತ್ಮನ) ಎಂಟು ರೀತಿಯ ಭಿನ್ನ ಭಿನ್ನ ಪ್ರಕೃತಿಗಳಿವೆ. ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಮನಸ್ಸು, ಬುದ್ಧಿ, ಅಹಂಕಾರ, ನಾನೇ (ಪರಮಾತ್ಮ) ಈ ಸಮಸ್ತ ಜಗತ್ತಿನ ರಚನೆ ಹಾಗೂ ಪ್ರಳಯವನ್ನು ಮಾಡುವವನಾಗಿದ್ದೇನೆ.

**ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ**
**ಧನಂಜಯ । ಮಯಿ ಸರ್ವಮಿದಂ**
**ಪ್ರೋತಂ ಸೂತ್ರೇ ಮಣಿಗಣಾ ಇವ ॥ ೩೫॥**

*(ಗೀತಾ : ೭-೭)*

ಅರ್ಥ : ಹೇ ಧನಂಜಯ! ನನಗಿಂತ ಶ್ರೇಷ್ಠರಾದವರ್‍ಯಾರೂ ಇಲ್ಲ. ಇವೆಲ್ಲವೂ (ನನ್ನಲ್ಲಿಯೇ) ದಾರದಲ್ಲಿ ಪೋಣಿಸಿದ ಮಣಿಗಳಂತೆ ಇವೆ.

**ರಸೋಹಮಪ್ಸು ಕೌಂತೇಯ! ಪ್ರಭಾಸ್ಮಿ ಶಶಿಸೂರ್ಯಯೋಃ ।**
**ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು ॥೩೬॥**

*(ಗೀತಾ: ೭-೮)*

ಅರ್ಥ : ಹೇ ಕೌಂತೇಯ! ನಾನು ನೀರಿನಲ್ಲಿ ರಸ ರೂಪದಲ್ಲಿದ್ದೇನೆ. ಸೂರ್ಯ ಚಂದ್ರರಲ್ಲಿ ಪ್ರಕಾಶವಾಗಿದ್ದೇನೆ. ಸಮಸ್ತ ವೇದಗಳಲ್ಲಿ ಪ್ರಣವ (ಓಂ) ಆಗಿದ್ದೇನೆ. ಆಕಾಶದಲ್ಲಿ ಶಬ್ದವಾಗಿದ್ದೇನೆ. ಮನುಷ್ಯರಲ್ಲಿ ಪುರುಷಾರ್ಥವಾಗಿದ್ದೇನೆ.

**ಪುಣ್ಯೋ ಗಂಧಃ ಪೃಥ್ವಿವ್ಯಾಂಚ ತೇಜಶ್ಚಾಸ್ಮಿ ವಿಭಾವಸೌ ।**
**ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು ॥೩೭॥**

*(ಗೀತಾ : ೭-೯)*

ಅರ್ಥ : ಪೃಥ್ವಿಯಲ್ಲಿ ಉತ್ತಮ ಸುಗಂಧವಾಗಿದ್ದೇನೆ. ಅಗ್ನಿಯಲ್ಲಿ ತೇಜವಾಗಿದ್ದೇನೆ. ಪ್ರಾಣಿ ಮಾತ್ರದಲ್ಲಿ ಜೀವನವಾಗಿದ್ದೇನೆ. ತಪಸ್ವಿಗಳಲ್ಲಿ ತಪವಾಗಿದ್ದೇನೆ.

**ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಮ್ ।**
**ಬಲಂ ಬಲವತಾಂ ಚಾಹಂ ಕಾಮರಾಗ ವಿವರ್ಜಿತಮ್ ॥೩೮॥**

*(ಗೀತಾ: ೭-೧೦;೧೧)*

ಅರ್ಥ : ನಾನೇ ಬುದ್ಧಿಶಾಲಿಗಳಲ್ಲಿ ಬುದ್ಧಿಯಾಗಿಯೂ ತೇಜಸ್ವಿಗಳಲ್ಲಿ ತೇಜವಾಗಿಯೂ, ಬಲಶಾಲಿಗಳಲ್ಲಿ ಕಾಮ ಮತ್ತು ರಾಗರಹಿತ ಬಲವಾಗಿಯೂ ನಿವಾಸಿಸುತ್ತೇನೆ.

**ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।**
**ಅರ್ಥೋರ್ಥೀ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥**
**ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥೩೯॥**

*(ಗೀತಾ : ೭;೧೬;೧೯)*

ಅರ್ಥ : ಈ ನಾಲ್ಕು ರೀತಿಯ ಸುಕೃತಾತ್ಮ (ಧರ್ಮಾತ್ಮ)ರು ನನ್ನನ್ನು (ಪರಮಾತ್ಮನನ್ನು) ಭಜಿಸುತ್ತಾರೆ. ೧. ಆರ್ತ (ದುಃಖ ಕ್ಲೇಡಾದವರು), ೨. ಜಿಜ್ಞಾಸು (ಬ್ರಹ್ಮನನ್ನು ಪಡೆಯಲಿಚ್ಛಿಸುವವರು), ೩. ಆರ್ಥೀ (ಕಾಮನೆಯುಳ್ಳವರು), ೪. ಜ್ಞಾನಿಗಳು (ಅವರೆಲ್ಲರಲ್ಲಿ ಶ್ರೇಷ್ಠರಾದವರು) ಇವರೆಲ್ಲರೂ ವಾಸುದೇವನನ್ನೇ (ಪರಮಾತ್ಮ) ಸರ್ವಸ್ವವೆಂದು ತಿಳಿಯುತ್ತಾರೆ.

**ಜರಾಮರಣ ಮೋಕ್ಷಾಯ ಮಾಮಾಶ್ರಿತ್ಯಯತಂ ತಿಯೇ ।**
**ತೇ ಬ್ರಹ್ಮ ತದ್ವಿದುಃ ಕೃತ್ಸ್ನ ಮಧ್ಯಾತ್ಮಂ ಕರ್ಮ ಚಾಖಿಲಮ್ ॥೪೦॥**

*(ಗೀತಾ ೭-೨೯)*

ಅರ್ಥ : ಯಾರು ಜರಾ (ವೃದ್ಧಾವಸ್ಥೆ) ಮತ್ತು ಮೃತ್ಯುವಿನಿಂದ ಪಾರಾಗಲು ನನ್ನನ್ನು (ಪರಮಾತ್ಮನನ್ನು) ಅವಲಂಬಿಸುತ್ತಾರೋ ಅವರು ಆ ಬ್ರಹ್ಮನನ್ನು ಸಂಪೂರ್ಣ ಆಧ್ಯಾತ್ಮ ಜ್ಞಾನವನ್ನು ಮತ್ತು ಎಲ್ಲಾ ಕರ್ಮಗಳನ್ನು ಬಲ್ಲವರಾಗುತ್ತಾರೆ.

**ಅಂತ ಕಾಲೇಚ ಮಾಮೇವ ಸ್ಮರಾನ್ಮುಕ್ತ್ವಾ ಕಲೇವರಮ್ ।**
**ಯಃ ಪ್ರಯಾತಿಸಮುದ್ಭಾವಂ ಯಾತಿನ್ಯಾಸ್ತ್ಯತ್ರ ಸಂಶಯಃ ॥೪೧॥**

*(ಗೀತಾ : ೮-೫)*

ಅರ್ಥ : ಯಾವನು ಅಂತ್ಯಕಾಲದಲ್ಲಿ ನನ್ನ (ಪರಮಾತ್ಮನ) ಸ್ಮರಣೆ ಮಾಡುತ್ತಾ ಶರೀರ ತ್ಯಾಗ ಮಾಡುತ್ತಾನೋ ಅವನು ನನ್ನ ಭಾವವನ್ನು (ಮುಕ್ತಿ) ಪಡೆಯುತ್ತಾನೆ. ಇದರಲ್ಲಿ ಲೇಶಮಾತ್ರವೂ ಸಂಶಯವಿಲ್ಲ.

**ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುದ್ಧ್ಯಚ ।**
**ಮಯ್ಯರ್ಪಿತ ಮನೋ ಬುದ್ಧಿರ್ಮಾಮೇ ವೈಷ್ಯಸ್ಯ ಸಂಶಯಮ್ ॥೪೨॥**

*(ಗೀತಾ : ೮-೭)*

ಅರ್ಥ : ಆದುದರಿಂದ ಸದಾಕಾಲ ನನ್ನಲ್ಲಿ (ಪರಮಾತ್ಮನಲ್ಲಿ) ಮನಸ್ಸು ಮತ್ತು ಬುದ್ಧಿಯನ್ನು ಅರ್ಪಿಸಿ, ನನ್ನನ್ನೇ ಸ್ಮರಿಸುತ್ತಾ ಯುದ್ಧ ಮಾಡಿದರೆ ನಿಸ್ಸಂದೇಹವಾಗಿ ನನ್ನನ್ನೇ ಹೊಂದುತ್ತೀಯೆ.

**ಸರ್ವದ್ವಾರಾಣಿ ಸಂಯಮ್ಯ ಮನೋಹೃದಿ ನಿರುಧ್ಯಚ ।**
**ಮೂರ್ಧ್ನ್ಯಾರ್ಧಾಯಾತ್ಮನಃ ಪ್ರಾಣಮಸ್ಥಿತೋ ಯೋಗಧಾರಣಾಮ್ ॥೪೩॥**

*(ಗೀತಾ : ೮-೧೨)*

ಅರ್ಥ : ಸಮಸ್ತ ದ್ವಾರಗಳನ್ನು (ಕಣ್ಣು, ಕಿವಿ ಮುಂತಾದ) ಸಂಯಮದಲ್ಲಿಟ್ಟುಕೊಂಡು, ಮನಸ್ಸನ್ನು ಹೃದಯದಲ್ಲಿ ಸ್ಥಿರವಾಗಿರಿಸಿ, ತನ್ನ ಪ್ರಾಣವನ್ನು ಮೂರ್ಧಾ (ಶಿರಸ್ಸು)ಗೆ ಕೊಂಡೊಯ್ದು ಯೋಗಾಭ್ಯಾಸದಲ್ಲಿ ನಿರತನಾಗಬೇಕು.

**ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।**
**ಜ್ಞಾನಂ ವಿಜ್ಞಾನಸಹಿತಂ ಯಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥೪೪॥**

*(ಗೀತಾ : ೯-೧)*

ಅರ್ಥ : ಹೇ ನಿಷ್ಪಾಪನಾದ ಅರ್ಜುನ! ನಿನಗೆ ನಾನು ಇದಕ್ಕಿಂತಲೂ ಮಿಗಿಲಾದ ವಿಜ್ಞಾನದೊಂದಿಗಿರುವ ಉತ್ಕೃಷ್ಟ ಜ್ಞಾನವನ್ನು ತಿಳಿಯಪಡಿಸುವೆ. ಅದನ್ನು ತಿಳಿದುಕೊಂಡು ನೀನು ಅಶುಭದಿಂದ ಮುಕ್ತನಾಗುವೆ.

**ಅಹಂ ಕ್ರತುರಹಂ ಯಜ್ಞಃ ಸ್ವಧಾಹ ಮಹಮೌಷಧಮ್ ।**
**ಮಂತ್ರೋ ಹಮಹಮೇವಾಜ್ಯ ಮಹಮಗ್ನಿರಹಂ ಹುತಮ್ ॥**
**ವೇದ್ಯಂ ಪವಿತ್ರೋಂಕಾರ ಋಕ್ ಸಾಮಯಜುರೇವಚ ॥೪೫॥**

*(ಗೀತಾ : ೯-೧೬;೧೭)*

ಅರ್ಥ : ನಾನು (ಪರಮಾತ್ಮ) ಯಜ್ಞನಾಗಿದ್ದೇನೆ. ಕ್ರತುವಾಗಿದ್ದೇನೆ ನಾನೇ ಸ್ವಧಾ ಆಗಿದ್ದೇನೆ. ನಾನೇ ಔಷಧಿ (ಹವನ ಸಾಮಗ್ರಿ)ಯಾಗಿದ್ದಾನೆ. ನಾನೇ ಮಂತ್ರ, ನಾನೇ ಘೃತ, ನಾನೇ ಯಜ್ಞಾಗ್ನಿ ಮತ್ತು ಯಜ್ಞದಲ್ಲಿ ಹಾಕಿದ ಹವಿಸ್ಸು ನಾನೇ ಆಗಿದ್ದೇನೆ. ನಾನೇ ಓಂಕಾರ ಮತ್ತು ನಾನೇ ಋಕ್, ಯಜುಸ್ಸಾಮವಾಗಿದ್ದೇನೆ.

**ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।**
**ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವಮದರ್ಪಣಮ್ ॥೪೬॥**

*(ಗೀತಾ : ೯-೨೭)*

ಅರ್ಥ : ಹೇ ಕೌಂತೇಯ! ನಿನ್ನ ಕರ್ಮದ ಫಲ. ಭಕ್ಷ್ಯ, ಹೋಮದ ಫಲ, ದಾನದ ಫಲ ಮತ್ತು ತಪಸ್ಸಿನ ಫಲವನ್ನು ನನಗೆ (ಪರಮಾತ್ಮ) ಸರ್ವ ಸಮರ್ಪಣಾ ಭಾವದಿಂದ ಅರ್ಪಿಸು.

**ಜ್ಯೋತಿಷಾಮಹಮಂಶುಮಾನ್ ನಕ್ಷತ್ರಾಣಾಮಹಂ ಶಶಿ ॥೪೭॥**

*(ಗೀತಾ : ೧೦-೨೧)*

ಅರ್ಥ : ಪ್ರಕಾಶವುಳ್ಳವುಗಳಲ್ಲಿ ನಾನು ಕಿರಣ (ಸೂರ್ಯ)ನಾಗಿದ್ದೇನೆ. ನಕ್ಷತ್ರಗಳಲ್ಲಿ ನಾನು ಚಂದ್ರನಾಗಿದ್ದೇನೆ.

**ರುದ್ರಾಣಾಂ ಶಂಕರಶ್ಚಾಸ್ಮಿ ವಿತ್ತೇಶೋ ಯಕ್ಷರಕ್ಷಸಾಮ್ ।**
**ಮಹರ್ಷೀಣಾಂ ಭೃಗುರಹಂ ಮೇರುಃ ಶಿಖರಿಣಾಮಹಮ್ ॥೪೮॥**

*(ಗೀತಾ: ೧೦-೨೩;೨೫)*

ಅರ್ಥ : ರುದ್ರರಲ್ಲಿ ನಾನು ಶಂಕರನು. ಯಕ್ಷರಾಕ್ಷಸರಲ್ಲಿ ಕುಬೇರನಾಗಿದ್ದೇನೆ. ಮಹರ್ಷಿಗಳಲ್ಲಿ ಭೃಗು ಮತ್ತು ಪರ್ವತಗಳಲ್ಲಿ ಮೇರುವಾಗಿದ್ದೇನೆ.

**ಅಶ್ವತ್ಥಃ ಸರ್ವವೃಕ್ಷಾಣಾಂ ದೇವರ್ಷೀಣಾಂ ಚ ನಾರದಃ ।**
**ಉಚ್ಚೈ ಶ್ರವಸಮಶ್ವಾನಾಂ ಸಿದ್ಧಾನಾಂ ಕಪಿಲೋಮುನಿಃ ॥೪೯॥**

*(ಗೀತಾ : ೧೦-೨೬;೨೭)*

ಅರ್ಥ : ಎಲ್ಲಾ ವೃಕ್ಷಗಳಲ್ಲಿ ಅಶ್ವತ್ಥವಾಗಿದ್ದೇನೆ. ದೇವರ್ಷಿಗಳಲ್ಲಿ ನಾರದನಾಗಿದ್ದೇನೆ. ಕುದುರೆಗಳಲ್ಲಿ ಉಚ್ಚೈಶ್ರವವಾಗಿದ್ದೇನೆ. ಸಿದ್ಧರಲ್ಲಿ ಕಪಿಲಮುನಿ ಆಗಿದ್ದೇನೆ.

**ಐರಾವತಂ ಗಜೇಂದ್ರಾಣಾಂ ನರಾಣಾಂ ಚ ನರಾಧಿಪಮ್ ।**
**ಆಯುಧಾನಾಮಹಂ ವಜ್ರಂ ಸರ್ಪಾಣಾಮಸ್ಮಿ ವಾಸುಕಿಃ ॥೫೦॥**

*(ಗೀತಾ :೧೦-೨೭;೨೮)*

ಅರ್ಥ : ಗಜಗಳಲ್ಲಿ ಐರಾವತನೂ, ನರರಲ್ಲಿ ನರೇಂದ್ರನೂ (ರಾಜ) ಆಯುಧಗಳಲ್ಲಿ ವಜ್ರವೂ, ಸರ್ಪಗಳಲ್ಲಿ ವಾಸುಕಿಯೂ ಆಗಿದ್ದೇನೆ.

**ವರುಣೋ ಯಾದಸಾಮಹಮ್ ಯಮಃ ಸಂಯಮತಾಮಹಮ್।**
**ಪ್ರಹ್ಲಾದಃ ಸರ್ವದೈತ್ಯಾನಾಂ ಕಾಲಃ ಕಲಯತಾಮಹಮ್ ॥೫೧॥**

*(ಗೀತಾ : ೧೦-೨೯;೩೦)*

ಅರ್ಥ : ಜಲಚರಗಳಲ್ಲಿ ವರುಣನೂ, ನಿಯಮಕರಲ್ಲಿ ಯಮನೂ ಆಗಿದ್ದೇನೆ. ಸಮಸ್ತ ದೈತ್ಯರಲ್ಲಿ ಪ್ರಹ್ಲಾದನೂ, ಗಣನೆಯನ್ನು ಮಾಡುವವರಲ್ಲಿ ಕಾಲನೂ ಆಗಿದ್ದೇನೆ.

**ಮೃಗಾಣಾಂ ಚ ಮೃಗೇಂದ್ರೋಽಹಂ ವೈನತೇಯಶ್ಚ ಪಕ್ಷಿಣಾಮ್ ।**
**ಅಕ್ಷರಾಣಾಮಕಾರೋಽಸ್ಮಿ ರಾಮಃ ಶಸ್ತ್ರಭೃತಾಮಹಮ್ ।**
**ಮಾಸಾನಾಂ ಮಾರ್ಗಶೀರ್ಷೋಽಹಮೃತೂನಾಂ ಕುಸುಮಾಕರ ॥೫೩॥**

*(ಗೀತಾ : ೧೦-೩೦; ೩೧:೩೨:೩೩:೩೫)*

ಅರ್ಥ : ವನ್ಯಪಶುಗಳಲ್ಲಿ ಸಿಂಹನಾಗಿದ್ದೇನೆ. ಪಕ್ಷಿಗಳಲ್ಲಿ ಗರುಡನಾಗಿದ್ದೇನೆ. ಅಕ್ಷರಗಳಲ್ಲಿ 'ಅ'ಕಾರವಾಗಿದ್ದೇನೆ. ಶಸ್ತ್ರಧಾರಿಗಳಲ್ಲಿ ರಾಮನೂ, ಮಾಸಗಳಲ್ಲಿ ಮಾರ್ಗಶೀರ್ಷ ಹಾಗೂ ಋತುಗಳಲ್ಲಿ ವಸಂತ ಋತುವೂ ಆಗಿದ್ದೇನೆ.

**ವೃಷ್ಣೀನಾಂ ವಾಸುದೇವೋಽಸ್ಮಿ ಪಾಂಡವಾನಾಂ ಧನಂಜಯ ।**
**ಮುನಿನಾಮಪ್ಯಹಂ ವ್ಯಾಸಃ ಕವೀನಾಮುಶನಾ ಕವಿಃ ॥೩೭॥**

*(ಗೀತಾ: ೧೦-೩೭)*

ಅರ್ಥ : ವೃಷ್ಣಿ ವಂಶದಲ್ಲಿ ವಾಸುದೇವ (ಶ್ರೀಕೃಷ್ಣ)ನಾಗಿದ್ದೇನೆ. ಪಾಂಡವರಲ್ಲಿ ಅರ್ಜುನನಾಗಿದ್ದೇನೆ. ಮುನಿಗಳಲ್ಲಿ ವ್ಯಾಸನಾಗಿದ್ದೇನೆ. ಕವಿಗಳಲ್ಲಿ ಉಶನಾ ಕವಿ ಆಗಿದ್ದೇನೆ.

**ನಾಂತೋಽಸ್ತಿ ಮಮದಿವ್ಯಾನಾಂ ವಿಭೂತೀನಾಂ ಪರಂತಪ ॥೪೦॥**

*(ಗೀತಾ : ೧೦-೪೦)*

ಅರ್ಥ : ಹೇ ತಪಸ್ವಿ ಅರ್ಜುನ! ನನ್ನ (ಪರಮಾತ್ಮನ) ವಿಭೂತಿಗಳ ಅಂತ್ಯವೇ ಇಲ್ಲ.

**ಪಶ್ಯಮೇ ಪಾರ್ಥರೂಪಾಣಿ ಶತಶೋಽಥ ಸಹಸ್ರಶಃ ।**
**ನಾನಾ ವಿಧಾನಿ ದಿವ್ಯಾನಿ ನಾನಾ ವರ್ಣಾಕೃತೀನಿ ಚ ॥ ೫॥**

*(ಗೀತಾ : ೧೧-೫)*

ಅರ್ಥ : ಹೇ ಅರ್ಜುನ! (ನನ್ನ ವಿಭೂತಿಗಳನ್ನು ತಿಳಿದುಕೊಂಡ ನಂತರ) ನೀನು ನನ್ನ ಅನೇಕ ಪ್ರಕಾರದ ಅನೇಕ ಬಣ್ಣಗಳುಳ್ಳ ಮತ್ತು ಆಕಾರಗಳುಳ್ಳ ನೂರಾರು ಸಾವಿರಾರು ದಿವ್ಯ ರೂಪಗಳನ್ನು ನೋಡು.

**ನ ತು ಮಾಂ ಶಕ್ಯಸೇ ದ್ರಷ್ಟುಮನೇನೈವ ಸ್ವಚಕ್ಷುಷಾ ।**
**ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯಮೇ ಯೋಗಮೈಶ್ವರಮ್ ॥೮॥**

*(ಗೀತಾ : ೧೧-೮)*

ಅರ್ಥ : ನನ್ನನ್ನು ನೀನು ಈ ಕಣ್ಣುಗಳಿಂದ ನೋಡಲು ಸಾಧ್ಯವಿಲ್ಲ. ಆದುದರಿಂದಲೇ ನಿನಗೆ ನಾನು ದಿವ್ಯವಾದ ಅಂತಃ ಚಕ್ಷುಗಳನ್ನು (ಜ್ಞಾನಚಕ್ಷುಗಳನ್ನು) ಕೊಡುತ್ತೇನೆ. ಈಗ ನನ್ನ ಯೋಗದ ಐಶ್ವರ್ಯವನ್ನು ನೋಡು (ಎನ್ನುತ್ತಿರುವಂತೆಯೇ ಅರ್ಜುನನು ಶ್ರೀಕೃಷ್ಣನ ವಿಶ್ವರೂಪವನ್ನು ರಕ್ಷಿಸುತ್ತಾನೆ.)

**ಅನೇಕ ವಕ್ತ್ರನಯನಮನೇಕಾದ್‌ಭುತ ದರ್ಶನಂ ।**
**ಅನೇಕ ದಿವ್ಯಾಭರಣಂ ದಿವ್ಯಾನೇಕೋದ್ಯತಾಯುಧಮ್ ॥೧೦॥**

*(ಗೀತಾ : ೧೧-೧೦)*

ಅರ್ಥ : ಅನೇಕ ಮುಖ ಮತ್ತು ಅನೇಕ ಕಣ್ಣುಗಳುಳ್ಳವನಾಗಿದ್ದೇನೆ. ಅನೇಕ ರೀತಿಯಲ್ಲಿ ಕಂಡುಬರುತ್ತೇನೆ. ಅನೇಕ ದಿವ್ಯಾಭರಣಗಳುಳ್ಳವನಾಗಿದ್ದೇನೆ. ಅನೇಕ ಆಯುಧಗಳಿಂದ ಸುಸಜ್ಜಿತನಾಗಿದ್ದೇನೆ.[೧೨]

**ಯಥಾ ನದೀನಾಂ ಬಹವೋಂ ಬುವೇಗಾಃ**
**ಸಮುದ್ರ ಮೇವಾಭಿ ಮುಖಾದ್ರವಂತಿ ।**
**ತಥಾ ತವಾಮೀ ನರಲೋಕವೀರಾ**
**ವಿಶಂತಿ ವಕ್ತ್ರಾಣ್ಯಭಿ ವಿಜ್ವಲಂತಿ ॥೨೮॥**

*(ಗೀತಾ : ೧೧-೨೮)*

ಅರ್ಥ : ಯಾವ ರೀತಿ ನದಿಗಳ ಪ್ರವಾಹವು ಬಹಳ ವೇಗವಾಗಿ ಹರಿದು ಸಮುದ್ರದ ಕಡೆಗೆ ಹೋಗುತ್ತದೆಯೋ ಅದೇ ರೀತಿ (ಹೇ ವಿರಾಟ್ ರೂಪವುಳ್ಳ ಭಗವಂತನೇ!) ಈ ಮನುಷ್ಯರು ಶೂರ-ವೀರಾದಿಗಳು ಬಹಳ ವೇಗದಲ್ಲಿ ನಿನ್ನ ಸಮ್ಮುಖದಲ್ಲಿ ಪ್ರವೇಶ ಮಾಡುತ್ತಿದ್ದಾರೆ.

**ಯಥಾ ಪ್ರದೀಪ್ತಂ ಜ್ವಲನಂ ಪತಂಗಾ**
**ವಿಶಂತಿ ನಾಶಾಯ ಸಮೃದ್ಧ ವೇಗಾಃ ।**
**ತಥೈವ ನಾಶಾಯ ವಿಶಂತಿ ಲೋಕಾಸ್ತವಾಪಿ**
**ವಕ್ತ್ರಾಣಿ ಸಮೃದ್ಧ ವೇಗಾಃ ॥೨೯॥**

*(ಗೀತಾ : ೧೧-೨೯)*

ಅರ್ಥ : ಬೆಳಗುತ್ತಿರುವ ದೀಪದ ಕಡೆಗೆ ಪತಂಗಗಳು ನಾಶವಾಗುವುದಕ್ಕೋಸ್ಕರ ಬಹಳ ವೇಗವಾಗಿ ಓಡಿ ಬರುತ್ತವೆಯೋ ಅದೇ ರೀತಿ ಈ ಜನರೂ ಸಹ ನಾಶ ಹೊಂದುವುದಕ್ಕಾಗಿ ನಿನ್ನ ಕಡೆಗೆ ಬಹಳ ವೇಗದಿಂದ ಪ್ರವೇಶಿಸುತ್ತಾರೆ.

**ಆಖ್ಯಾಹಿಮೇಕೋ ಭವಾನುಗ್ರರೂಪೋ**
**ಲೋಕಾನ್ಸಮಾಹರ್ತು ಮಿಹ ಪ್ರವೃತ್ತಃ ।**
**ನಮೋ ನಮಸ್ತೇಸ್ತು ಸಹಸ್ರಕೃತ್ವ ನಮಃ**
**ಪುರಸ್ಥಾದಥ ಪೃಷ್ಠತಸ್ತೇ ॥೬೦॥**

(ಗೀತಾ : ೧೧-೩೧, ೩೯-೪೦)

ಅರ್ಥ : ಹೇ ಅದ್ಭುತ ರೂಪವುಳ್ಳವನೇ? ಉಗ್ರರೂಪವುಳ್ಳವನಾದ ನೀನಾರು? ಇಲ್ಲಿ ನೆರೆದಿರುವವರೆಲ್ಲರನ್ನೂ ಒಟ್ಟುಗೂಡಿಸಲು ಪ್ರವೃತ್ತನಾಗಿದ್ದೀಯೆ! ಇಗೋ ನಿನಗೆ ಸಾವಿರ, ಸಾವಿರ, ಬಾರಿ ನಮಸ್ಕಾರ. ಹಿಂದಿನಿಂದಲೂ, ಮುಂದಿನಿಂದಲೂ, ಎಲ್ಲಾ ಕಡೆಯಿಂದಲೂ ನಮಸ್ಕರಿಸುತ್ತೇನೆ.[೧೩]

**ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ।**
**ಶಕ್ಯ ಏವಂ ವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ॥೬೧॥**

*(ಗೀತಾ : ೧೧-೫೩)*

ಅರ್ಥ : ಹೇ ಅಜುನ! ನನ್ನ (ಪರಮಾತ್ಮನ) ಯಾವ ಅದ್ಬುತ ರೂಪವನ್ನು ನೋಡಿದ್ದೀಯೋ ಇದನ್ನು ವೇದವನ್ನು ಓದುವುದರಿಂದಲೂ ತಪಸ್ಸಿನಿಂದಲೂ, ದಾನದಿಂದಲೂ ಮತ್ತು ಯಜ್ಞ ಮಾಡುವುದರಿಂದಲೂ ನೋಡಲಸಾಧ್ಯ.

**ಮತ್ಕರ್ಮಕೃನ್ಮತ್ಪರಮೋ ಮದ್‌ಭಕ್ತಃ ಸಂಗವರ್ಜಿತಃ।**
**ನಿರ್ವೈರ ಸರ್ವಭೂತೇಷು ಯಃ ಸಮಾಮೇತಿ ಪಾಂಡವ ॥೬೨॥**

*(೧೧-೫೫)*

ಅರ್ಥ : ಹೇ ಪಾಂಡವ! ಯಾವನು ನನ್ನ (ಪರಮಾತ್ಮ) ಪ್ರಾಪ್ತಿಗೋಸ್ಕರ ಕರ್ಮ ಮಾಡುತ್ತಾನೋ ಅವನು ನನ್ನ (ಪರಮಾತ್ಮನ) ಭಕ್ತನಾಗುತ್ತಾನೆ. ಸಮಸ್ತ ಪ್ರಾಣಿಗಳೊಡನೆ ನಿರ್ವೈರನೂ, ನಿಸ್ಸಂಗನೂ ಆಗಿರುತ್ತಾನೆಯೋ ಅವನೇ ನನ್ನನ್ನು (ಪರಮಾತ್ಮ) ಪಡೆಯುತ್ತಾನೆ.

**ಯಥಾ ಸರ್ವಗತಂ ಸೌಕ್ಷ್ಮ್ಯಾದಾಕಾಶಂ ನೋಪಲಿಪ್ಯತೇ।**
**ಸರ್ವ ತ್ರಾವಸ್ಥಿತೋ ದೇಹೇ ತಥಾಽಽತಾನೋಪಲಿಪ್ಯತೇ ॥೬೩॥**

*(ಗೀತಾ : ೧೧;೩೨)*

ಅರ್ಥ : ಆ ಆತ್ಮನು (ಪರಮಾತ್ಮನು) ಸರ್ವತ್ರ (ದೇಹದ ಕಣ ಕಣದಲ್ಲಿಯೂ) ಸ್ಥಿತನಾಗಿದ್ದಾನೆ. (ಆದರೆ) ಯಾವ ರೀತಿ ಆಕಾಶವು ಸರ್ವತ್ರ ಇದ್ದರೂ ಸೂಕ್ಷ್ಮವಾದ ಕಾರಣ (ಯಾವುದರೊಂದಿಗೂ) ಲಿಪ್ತವಾಗುವುದಿಲ್ಲವೋ ಅದೇ ರೀತಿ ಪರಮಾತ್ಮನೂ ದೇಹನೊಂದಿಗೆ ಲಿಪ್ತನಾಗುವುದಿಲ್ಲ.[೧೪]

**ಯಥಾ ಪ್ರಕಾಶ ಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ।**
**ಕ್ಷೇತ್ರ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶ ಯತಿ ಭಾರತ ॥೬೪॥**

*(ಗೀತಾ : ೧೩-೩೩)*

ಅರ್ಥ : ಯಾವ ರೀತಿ ಒಬ್ಬ ಸೂರ್ಯನು ಎಲ್ಲಾ ಲೋಕಗಳನ್ನೂ ಪ್ರಕಾಶಿಸುತ್ತಾನೋ ಅದೇ ರೀತಿ ಅವನು (ಪರಮಾತ್ಮನು) ಸಮಸ್ತ ಬ್ರಹ್ಮಾಂಡವನ್ನು ಪ್ರಕಾಶಿಸುತ್ತಾನೆ.[೧೫]

**ಸತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ।**
**ಜ್ಞಾನಮಾವೃತ್ಯತಮಃ ಪ್ರಮಾದೇ ಸಂಜಯತ್ಯುತಾ ॥೬೫॥**

*(ಗೀತಾ : ೧೪-೯)*

ಅರ್ಥ : ಹೇ ಭಾರತ! ಸತ್ವಗುಣವು ಸುಖದಲ್ಲಿ ಪ್ರವೃತ್ತಗೊಳಿಸುತ್ತದೆ. ರಜೋಗುಣವು ಕರ್ಮಮಾಡಲು ಪ್ರೇರೇಪಿಸುತ್ತದೆ ಮತ್ತು ತಮೋಗುಣವು ಜ್ಞಾನವನ್ನು ತುಳಿದು ಪ್ರಮಾದ (ಅಲಸ್ಯ)ದಲ್ಲಿ ತೊಡಗಿಸುತ್ತದೆ.[೧೬]

**ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ।**
**ಜಘನ್ಯಗುಣವೃತ್ತಿಸ್ಥಾ ಅದೋಗಚ್ಛಂತಿ ತಾಮಸಾಃ ॥೬೬॥**

*(ಗೀತಾ : ೧೪-೧೮)*

ಅರ್ಥ : ಸಾತ್ವಿಕ ಗುಣವುಳ್ಳವರು ಮೇಲೆ ಹೋಗುತ್ತಾರೆ[೧೭] ರಜೋಗುಣದವರು ಮಧ್ಯದಲ್ಲಿರುತ್ತಾರೆ ಹಾಗೂ ತಮೋಗುಣದವರು ಕೆಳಗೆ ಹೋಗುತ್ತಾರೆ.

**ಸಮದುಃಖಸುಖಃಸ್ವಸ್ಥ ಸಮಲೋಷ್ಟಾಶ್ಮ ಕಾಂಚನಃ।**
**ತುಲ್ಯಪ್ರಿಯಾ ಪ್ರಿಯೋ ಧೀರ ತುಲ್ಯನಿಂದಾತ್ಮ ಸಂಸ್ಕೃತಿಃ ॥೬೭॥**

**ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರೋರಪಕ್ಷಯೋಃ।**
**ಸರ್ವಾರಂಭ ಪರಿತ್ಯಾಗೀಗುಣಾತೀತಃ ಸ ಉಚ್ಯತೇ ॥೬೮॥**

*(ಗೀತಾ : ೧೪-೨೪;೨೫)*

ಅರ್ಥ : ಯಾವನು ಸುಖ-ದುಃಖವನ್ನು ಸಮಾನವಾಗಿ ತಿಳಿಯುತ್ತಾನೋ ಅವನೇ ಗುಣಾತೀತ. ಯಾವನು ಸ್ವಸ್ಥನಾಗಿ ತನ್ನಲ್ಲಿಯೇ ರಮಿಸುತ್ತಾನೋ, ಯಾವನು ಕಲ್ಲು, ಚಿನ್ನ, ಬೆಳ್ಳಿಯನ್ನು ಸಮಾನವಾಗಿ ತಿಳಿಯುತ್ತಾನೋ, ಯಾವನು ಪ್ರಿಯಾಪ್ರಿಯಗಳನ್ನೂ ನಿಂದಾಸ್ತುತಿಗಳನ್ನೂ, ಮಿತ್ರಶತ್ರುಗಳನ್ನೂ ಸಮಾನವಾಗಿ ನೋಡುತ್ತಾನೋ ಮತ್ತು ಸಮಸ್ತ ಕರ್ಮಗಳನ್ನು[೧೮] ತ್ಯಜಿಸಿದ್ದಾನೋ ಅವನೇ ಪರಮೇಶ್ವರನ ಸಾಕ್ಷಾತ್ಕಾರ ಮಾಡಲು ಶಕ್ತನಾಗಿದ್ದಾನೆ; ಯೋಗ್ಯನಾಗಿದ್ದಾನೆ.

**ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ।**
**ಸಗುಣಾನ್ಸಮತೀತ್ಯೈತಾನ್ ಬ್ರಹ್ಮ ಭೂಯಾಮ ಕಲ್ಪತೇ ॥೬೯॥**

*(ಗೀತಾ : ೧೪-೨೬)*

ಅರ್ಥ : ಯಾವನು ನಿಶ್ಚಲವಾದ ಭಕ್ತಿಯಿಂದ ನನ್ನ ಉಪಾಸನೆಯನ್ನು ಮಾಡುತ್ತಾನೋ ಅವನು ತ್ರಿಗುಣಾತೀತನಾಗಿ ಮುಕ್ತಿಯನ್ನು ಪಡೆಯುತ್ತಾನೆ.

**ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ।**
**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥೭೦॥**

*(ಗೀತಾ : ೧೮-೬೬)*

ಅರ್ಥ : ಸರ್ವಧರ್ಮಗಳನ್ನು ತ್ಯಜಿಸಿ[೧೯] ಕೇವಲ ನನ್ನನ್ನು (ಪರಮಾತ್ಮನನ್ನು) ಶರಣುಹೊಂದು. ನಾನು ನಿನ್ನನ್ನು ಎಲ್ಲಾ ಪಾಪಗಳಿಂದ ಮುಕ್ತಗೊಳಿಸುವೆ. ಆ ಬಗ್ಗೆ ಚಿಂತಿಸಬೇಡ.

## ಟಿಪ್ಪಣಿಗಳು

೧. ಆವಾಗಮನದ ಬಗ್ಗೆ ಈ ದೃಷ್ಟಾಂತ=ಯಾವ ರೀತಿ ಬಾಲಕನು ಯುವಕನಾದರೂ ಆತನಲ್ಲಿರುವ ಜೀವಾತ್ಮನಲ್ಲಿ ಯಾವ ಪರಿವರ್ತನೆಯಾಗುವುದಿಲ್ಲವೋ, ಅದೇ ರೀತಿ ಇನ್ನೊಂದು ಜನ್ಮವನ್ನು ಪಡೆದರೂ ಜೀವಾತ್ಮನು ಅದೇ ಸ್ಥಿತಿಯಲ್ಲಿರುತ್ತಾನೆ. ಶರೀರ ಮಾತ್ರ ಬದಲಾಗುತ್ತದೆ.

**'ಯೋನಿಮನ್ಯೇ ಪ್ರಪದ್ಯಂತೇ ಶರೀರತ್ವಾಯ ದೇಹಿನಃ'**

*(ಕಠೋಪನಿಷದ್)*

೨. ನಿಷ್ಕಾಮಕರ್ಮದ ತಾತ್ಪರ್ಯವೇನೆಂದರೆ ಕರ್ಮವನ್ನು ಮಾಡು. ಅದರ ಫಲವನ್ನು ಅಪೇಕ್ಷಿಸಬೇಡ. ಶ್ರೀಕೃಷ್ಣನು ಅರ್ಜುನನೊಡನೆ ಯುದ್ಧ ಮಾಡುವುದು ನಿನ್ನ ಕರ್ಮ– ಪರಮ ಕರ್ತವ್ಯ, ಅದನ್ನು ಮಾಡಲೇಬೇಕು ಎನ್ನುತ್ತಾನೆ.

೩. ಯೋಗ ಶಬ್ದದ ಅರ್ಥ ಮಿಲನ ಎಂದಾಗಿದೆ. ಜೀವಾತ್ಮ – ಪರಮಾತ್ಮನ ಮಿಲನವೇ ಯೋಗ, ಸಫಲತೆ – ವಿಫಲತೆಗಳಲ್ಲಿ ಸಮಾನರಾದಾಗಲೇ ಯೋಗಿಯಾಗಲು ಸಾಧ್ಯ ಎಂದು ಶ್ರೀಕೃಷ್ಣನು ಉಪದೇಶಿಸುತ್ತಾನೆ.

೪. ಧರ್ಮ ಎಂದರೆ ವರ್ಣಾಶ್ರಮ ಧರ್ಮ ಎಂದರ್ಥ. ಬ್ರಾಹ್ಮಣನ ಧರ್ಮ ಅಧ್ಯಯನ – ಅಧ್ಯಾಪನ, ಹಾಗೂ ಕ್ಷತ್ರಿಯ ಧರ್ಮ ದುಷ್ಟನನ್ನು ಸಂಹರಿಸಿ ಧರ್ಮಾತ್ಮರನ್ನು ರಕ್ಷಿಸುವುದು. ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸುವುದೇನೆಂದರೆ, ಕ್ಷತ್ರಿಯನಾಗಿದ್ದೀಯೆ! ಯುದ್ಧ ಮಾಡುವುದು ನಿನ್ನ ಧರ್ಮ ವಾಗಿದೆ. ನಿನ್ನ ಧರ್ಮವನ್ನು ಬಿಟ್ಟು ರಣರಂಗದಿಂದ ವಿಮುಖನಾಗಿದ್ದೀಯೆ! ಇದು ಉಚಿತವಲ್ಲ. ಕ್ಷಾತ್ರಧರ್ಮ ಎಷ್ಟು ಕೆಟ್ಟದೆನಿಸಿದರೂ ನಿನಗದು ಶ್ರೇಯಸ್ಕರವೇ. ಸರ್ವ ಸಾಧಾರಣವಾಗಿ ಜನರು ಧರ್ಮದ ಅರ್ಥ. ಮತಮತಾಂತರ ಎಂದು ತಿಳಿದುಕೊಳ್ಳುತ್ತಾರೆ. ಕೃಷ್ಣಾರ್ಜುನ ಸಂವಾದ ಸಮಯದಲ್ಲಿ ಜಗತ್ತಿನಲ್ಲಿ ವೈದಿಕ ಧರ್ಮವನ್ನು ಬಿಟ್ಟು ಮತ್ತ್ಯಾವ ಧರ್ಮವೂ ಇರಲಿಲ್ಲ.

೫. ಶ್ರೀಕೃಷ್ಣನು ಪರಮಯೋಗಿಯೂ, ಪವಿತ್ರನೂ ಆಗಿದ್ದನು. ಜೀವನ್ಮುಕ್ತಾವಸ್ಥೆಯಲ್ಲಿದ್ದ ಆ ಮಹಾತ್ಮನು ತನ್ನನ್ನು ಪರಮಾತ್ಮನ ಕಡೆಯಿಂದ ಬೋಧಿಸಲು ಸಮರ್ಥನೆಂದು ತಿಳಿದು ಕೊಂಡಿದ್ದನು.

೬. ಅಕರ್ಮ ಎಂದರೆ ಜ್ಞಾನ ಎಂದರ್ಥ. ಜ್ಞಾನಕಾಂಡಿ ಮತ್ತು ಕರ್ಮಕಾಂಡಿಗಳ ನಡುವೆ ಇರುವ ವೈಷಮ್ಯವನ್ನು ನಿವಾರಿಸಲು ಶ್ರೀಕೃಷ್ಣನು ಪ್ರಯತ್ನಿಸಿದ್ದಾನೆ. ಕರ್ಮ ಮಾಡುವವನು ನಿಷ್ಕರ್ಮ ಮಾಡಿದರೆ ಕರ್ಮಗಳು ಅವನನ್ನು ಬಂಧಿಸುವುದಿಲ್ಲ. ಜ್ಞಾನಿಯು ಲೋಕ ಕಲ್ಯಾಣಾರ್ಥ ನಿಸ್ಪೃಹವಾಗಿ ಕರ್ಮ ಮಾಡಿದರೆ ಅವನ ಜ್ಞಾನದಲ್ಲಿ ಏನೂ ನ್ಯೂನತೆ ಬರುವುದಿಲ್ಲ. ಇದೇ ಶ್ರೀಕೃಷ್ಣನ ಆಶಯ.

೭. ವಸ್ತುತಃ ಜ್ಞಾನವು ಕರ್ಮಕ್ಕಿಂತ ಶ್ರೇಷ್ಠವಾಗಿದೆ. ಆದರೆ ಇಲ್ಲಿ ಕರ್ಮ ಕಾಂಡದ ಶ್ರೇಷ್ಠತೆ ಕೇವಲ ಶ್ರದ್ಧೆಯನ್ನುಂಟು ಮಾಡುವುದಕ್ಕೋಸ್ಕರ ಹೇಳಲಾಗಿದೆ. ಏಕೆಂದರೆ ಸಾಧಾರಣ ವರ್ಗದ ಮನುಷ್ಯರು ಮೊದಲು ಕರ್ಮದಲ್ಲಿಯೇ ಪ್ರವೃತ್ತ ರಾಗಬೇಕು. ಇಲ್ಲದಿದ್ದರೆ ಅವರು ಕರ್ಮಭ್ರಷ್ಟರಾಗುತ್ತಾರೆ. ಶ್ರೀಕೃಷ್ಣನು ಸರ್ವಸಾಧಾರಣ ಮನುಷ್ಯನಿಗೆ ಉಪದೇಶಿಸು ವುದೇನೆಂದರೆ ನೀನು ಜ್ಞಾನಕ್ಕಿಂತ ಕರ್ಮವನ್ನು ಶ್ರೇಷ್ಠವೆಂದು ತಿಳಿ. ಇದರಲ್ಲೇ ನಿನ್ನ ಕಲ್ಯಾಣ ನಿಹಿತವಾಗಿದೆ. ಕರ್ಮ ಮಾಡುತ್ತಾ ಮಾಡುತ್ತಾ ಕ್ರಮೇಣ ಜ್ಞಾನದ ಅಧಿಕಾರಿಯಾಗುತ್ತಾನೆ.

೮. ಜೀವಾತ್ಮನ ನಾಶ ಎಂದಿಗೂ ಆಗುವುದಿಲ್ಲ. ಏಕೆಂದರೆ ಅವನ ಅಜರ ಮತ್ತು ಅಮರನಾಗಿದ್ದಾನೆ. ಇಲ್ಲಿ ನಾಶ ಎಂದರೆ ಪತಿತನಾಗುವುದು. ನರಕಗಾಮಿಯಾಗುವುದು ಎಂದರ್ಥ.

೯. ಜೀವಾತ್ಮನ ನಾಶ ಎಂದಿಗೂ ಆಗುವುದಿಲ್ಲ. ಏಕೆಂದರೆ ಅವರು ಅಜರ ಮತ್ತು ಅಮರನಾಗಿದ್ದಾನೆ. ಇಲ್ಲಿ ನಾಶ ಎಂದರೆ ಪತಿತನಾಗುವುದು; ನರಕಗಾಮಿಯಾಗುವುದು ಎಂದರ್ಥ.

೧೦. "ವಾಸಯತಿ ಛಾದಯತಿ ಸ್ವಪ್ರಕಾಶೇನ ಇತಿ ವಾಸುಃ । ಸ್ವಪ್ರಕಾಶೇನ ದೀವ್ಯತೀತಿ ದೇವಃ! ಸಚಾಸೌದೇವಶ್ಚ ವಾಸುದೇವಃ!" ಯಾವನು ತನ್ನ ಪ್ರಕಾಶದಿಂದ ಅಚ್ಛಾದಿ ಸುತ್ತಾನೋ ಅವನು ವಾಸು ಎಂದು ಹೇಳಲ್ಪಡುತ್ತಾನೆ. ಯಾವನು ತನ್ನ ಪ್ರಕಾಶದಿಂದ ಬೆಳಗುತ್ತಾನೋ ಅವನು ದೇವ ಎಂದು ಹೇಳಲ್ಪಡುತ್ತಾನೆ. ಈ ರೀತಿ ವಾಸುದೇವ ಶಬ್ದ ಪರಮಾತ್ಮವಾಚಕವಾಗಿದೆ.

೧೧. ಬಲ್ಲವರು ಎಂದರೆ ಪರಮಾತ್ಮನ ಸಾಕ್ಷಾತ್ಕಾರ ಮಾಡಿ ಕೊಂಡವರು. ಯಾವ ರೀತಿ ಸಿಹಿಯನ್ನು ನಾಲಿಗೆಯ ಮೇಲಿಟ್ಟ ಕೂಡಲೇ ರುಚಿಯ ಅನುಭವವಾಗುತ್ತದೋ ಅದೇ ರೀತಿ ಯಾರು ಪರಮಾತ್ಮನ ಸಾಕ್ಷಾತ್ಕಾರ ಪಡೆದಿದ್ದಾರೋ ಅವರೇ ಪರಮಾತ್ಮನನ್ನು ಬಲ್ಲವರಾಗಿದ್ದಾರೆ. ಅರ್ಜುನನು ತನ್ನ ಒಡೆಯ ಪರಮಾತ್ಮನೇ ಎಂದು ಸರ್ವವ್ಯಾಪಕತ್ವವನ್ನು ಕಂಡು ಕೊಂಡರೆ, ಈ ಭೇದವನ್ನು ತಿಳಿಯಲು ಸಮರ್ಥನಾಗುತ್ತಾನೆ.

೧೨. ಈ ವಿಶ್ವರೂಪ ದರ್ಶನದ ಮುಖ್ಯ ಅಭಿಪ್ರಾಯವಾದರೂ ಪ್ರಭು ಪರಮಾತ್ಮನ ಅದ್ಭುತದ ರಚನೆಯ ದಿಗ್ದರ್ಶನ ಮಾಡುವುದೇ ಆಗಿದೆ. ಇದಕ್ಕೆ ಶ್ರುತಿಯ ಆಧಾರವೂ ಇದೆ. "ಸಹಸ್ರ ಶೀರ್ಷಾಃ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್" (ಯಜು:೩೧–೧) "ವಿಶ್ವತೋ ಚಕ್ಷುರುತ ವಿಶ್ವತೋ ಮುಖೋ" (ಋಗ್ವೇದ:೧೦–೮೧–೩) ಇದನ್ನೇ ಅರ್ಜುನನು ಜ್ಞಾನೇಂದ್ರಿಯಗಳ ಮೂಲಕ ನೋಡುತ್ತಿದ್ದಾನೆ.

೧೩. ಅರ್ಜುನನಂತೆಯೇ ಪ್ರತಿಯೋರ್ವನೂ ಸಾಯಂ ಪ್ರಾತಃ ಕಾಲದಲ್ಲಿ ಪರಮಾತ್ಮನಿಗೆ ನಮಸ್ಕರಿಸಬೇಕು. ಈ ಬಗ್ಗೆ ಶ್ರುತಿಯು ಆಧಾರವಾಗಿದೆ. "ನಮೋಸ್ತು ರುದ್ರೇಭ್ಯೋ ಯೇ ಪೃಥಿವ್ಯಾಂ ಯೇಷಾಮನ್ನಮಿಷವಃ। ತೇಭ್ಯೋದಶ ಪ್ರಾಚೀದಶ ದಕ್ಷಿಣಾದಶ ದಕ್ಷಿಣಾಧ ಪ್ರತೀಚೀರ್ದಶೋರ್ಧ್ವಾ । ತೇಭ್ಯೋ ನಮೋ ಅಸ್ತು ತೇ ನೋವಂತುತೇನೋ ಮೃಡಯಂತು ತೇಯಂ ದ್ವಿಷ್ಮೋ ಯಶ್ಚನೋ ದೇಷ್ಟಿ ತಮೇಷಾಂ ಜನ್ಮೇದಧಃ" ॥ *(ಯರ್ಜು: ೧೬-೬೬)*

೧೪. ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾಶ್ರುತೇನ ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವೃಣುತೇ ತನೂಂಸ್ವಾಮ್ ॥

*(ಮುಂಡಕ ಉ. ೬-೩)*

೧೫. ಈ ಶ್ಲೋಕದ ಭಾಷ್ಯವನ್ನು ಮಾಡುತ್ತಾ ತಿಲಕರು ಈ ರೀತಿ ಬರೆದಿದ್ದಾರೆ: "ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು ಕಾರ್ಯ ಕಲಾಪಗಳೂ ಪರಮೇಶ್ವರನ ಮೂಲಕವೇ ನಡೆಯುತ್ತದೆಂದು ತಿಳಿದು ಸಮಸ್ತ ವ್ಯವಹಾರಗಳನ್ನೂ ನಿರಭಿಮಾನಿಯಾಗಿ ಮಾಡಬೇಕು. ಈ ಶ್ಲೋಕದಲ್ಲಿ ಗೀತೆಯ ಸಾರವು ಬಂದಿದೆ. ಇದರಿಂದ ಒಂದು ವಿಷಯ ಸ್ಪಷ್ಟವಾಗುವುದು. ಏನೆಂದರೆ : ಗೀತೆಯ ಭಕ್ತಿ ಮಾರ್ಗವು ಆರಾಮವಾಗಿ ಕುಳಿತುಕೊಳ್ಳಲು ಉಪದೇಶಿಸುವುದಿಲ್ಲ. ಅದರ ಬದಲಿಗೆ ಉತ್ಕೃಷ್ಟ ಭಕ್ತಿಯೊಂದಿಗೆ ನಿಷ್ಕಾಮ ಕರ್ಮವನ್ನು ಮಾಡಲು, ಮಾಡುತ್ತಾ ಹೋಗಲು ಆದೇಶಿಸುತ್ತದೆ.

೧೬. ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷುಃ ಚಕ್ಷುರ್ನಲಿಪ್ಯತೇ ಚಕ್ಷುರ್ಷೈ ಬಾಹ್ಯದೋಷೈಃ । ಏಕಸ್ತಥಾ ಸರ್ವ ಭೂತಾಂತರಾತ್ಮಾ ನ ಲಿಪ್ಯತೇ ಲೋಕ ದುಃಖೇನ ಬಾಹ್ಯಃ। *(ಕಠೋರಪನಿಷತ್ ೫-೧೧)*

೧೭. ಯಾವಾತನು ಉತ್ಥಾನವನ್ನು ಬಯಸುತ್ತಾನೋ ಅವನು ತಮೋಗುಣವನ್ನು ತನ್ನಲ್ಲಿ ಹೆಚ್ಚಲು ಬಿಡಬಾರದು. ತಾಮಸೀ ಪದಾರ್ಥಗಳನ್ನು ತಿನ್ನುವುದು ಅಥವಾ ತಮೋಗುಣ ಹೊಂದಿದವರೊಂದಿಗೆ ಸಂಪರ್ಕದಿಂದ ತಮೋಗುಣವು ಹೆಚ್ಚುವುದು.

೧೮. ಮೇಲೆ ಹೋಗುವುದೆಂದರೆ ಉನ್ನತಿ ಹೊಂದುವುದು. ಕೆಳಗೆ ಹೋಗುವುದೆಂದರೆ ಪತನಾವಸ್ಥೆ ಎಂದರ್ಥ.

೧೯. ಸರ್ವಕರ್ಮಗಳನ್ನು ತ್ಯಜಿಸುವುದೆಂದರೆ ಲೌಕಿಕ ಕಾರ್ಯಕಲಾಪ ಗಳಾದ ವ್ಯಾಪಾರ, ಬೇಸಾಯ, ರಾಜ್ಯಾಡಳಿತ ಇತ್ಯಾದಿಗಳು. ಆದರೆ ಜಪ, ಸ್ವಾಧ್ಯಾಯ, ಯೋಗಾಭ್ಯಾಸ ಇತ್ಯಾದಿಗಳನ್ನು ತ್ಯಜಿಸುವುದಲ್ಲ.

೨೦. ಸಮಸ್ತ ಧರ್ಮಗಳನ್ನು ತ್ಯಜಿಸು ಎಂಬ ಈ ಶ್ಲೋಕದಿಂದ ಸಾಧಾರಣವಾಗಿ ಜನರು ಭ್ರಮೆಗೊಳ್ಳುತ್ತಾರೆ. ಆದರೆ ಈ ಶ್ಲೋಕದೊಂದಿಗೆ ಮೇಲಿನ ಶ್ಲೋಕವನ್ನು ಸೇರಿಸಿದಾಗ ಇದರ ಅರ್ಥವು (ಅಭಿಪ್ರಾಯ) ಸ್ಪಷ್ಟವಾಗುತ್ತದೆ. ವಾಸ್ತವಿಕವಾಗಿ ಈ ಆದೇಶ ಗುಣಾತೀತರಿಗೆ ಮಾತ್ರವೇ ವಿನಃ ಸರ್ವ ಸಾಧಾರಣರಿಗಲ್ಲ. ಸುಖ ದುಃಖಗಳನ್ನು ಸಮಾನವಾಗಿ ನೋಡುತ್ತಾ, ಮಿತ್ರ-ಶತ್ರುಗಳ ಭೇದವನ್ನು ಮಾಡದೆ ಸರ್ವತ್ರ ಬ್ರಹ್ಮನನ್ನು ನೋಡಲು ಅಭ್ಯಾಸ ಮಾಡುತ್ತಾ ವರ್ಣಾಶ್ರಮ ಧರ್ಮ ಮತ್ತು ಕರ್ಮಗಳ ಬಂಧನದಲ್ಲಿ ಸಿಲುಕದೆ ಪ್ರತಿ ಯೊಂದು ಕ್ಷಣವೂ ತನ್ನ ಸಮಸ್ತ ಶಕ್ತಿಯನ್ನು ಬ್ರಹ್ಮನಲ್ಲಿ ತನ್ಮಯನಾಗಲು ವಿನಿಯೋಗಿಸಬೇಕು. (ಇದೇ ಅವನ ಶರಣು ಹೋಗುವುದರ ಅಭಿಪ್ರಾಯ). ಆಗ ಪರಮಾತ್ಮನು ಅವನ ಮೇಲೆ ಕೃಪೆತೋರಿ ತನ್ನವನನ್ನಾಗಿ ಮಾಡಿಕೊಳ್ಳುತ್ತಾನೆ. ಅರ್ಥಾತ್ ಪಾಪದಿಂದ ಮುಕ್ತನನ್ನಾಗಿ ಮಾಡುತ್ತಾನೆ.

ಪ್ರಶ್ನೆ : ಪರಮೇಶ್ವರನು ಪಾಪಗಳನ್ನು ಕ್ಷಮಿಸುತ್ತಾನೆಯೇ? ಅದರ ಫಲವನ್ನು ಕೊಡುವುದಿಲ್ಲವೇ?

ಉತ್ತರ: ಯೋಗ (ಧ್ಯಾನ, ಧಾರಣ, ಸಮಾಧಿ) ಹಾಗೂ ಜ್ಞಾನರೂಪೀ ಅಗ್ನಿಯಲ್ಲಿ ಪಾಪವೆಂಬ ಮಲವು ದಗ್ಧವಾಗುತ್ತದೆ. ಇದೇ ವಿಷಯವನ್ನು ಉಪನಿಷತ್ತುಗಳಲ್ಲಿಯೂ ಹೇಳಲ್ಪಟ್ಟಿದೆ. ಭಿದ್ಯತೇ ಹೃದಯ ಗ್ರಂಥಿಶ್ಛಿದ್ಯಂತೇ ಸರ್ವ ಸಂಶಯಾಃ । ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥ (ಮುಂಡಕ ಉ. ೪-೮) ಅರ್ಜುನನು ಇದರಂತೆ ಆಚರಣೆ ಮಾಡಲು ಹೇಗೆ ಸಾಧ್ಯ? "ಅರ್ಜುನ! ನೀನಿನ್ನೂ ವರ್ಣಾಶ್ರಮ ಧರ್ಮದಲ್ಲಿ ಸಿಲುಕಿದ್ದೀಯೆ. ಆದುದರಿಂದಲೇ ರಣಕ್ಷೇತ್ರದಲ್ಲಿ ಬಂದ ಕಾರಣ ಯುದ್ಧಕ್ಕೆ ಸನ್ನದ್ಧನಾಗು. ವಿಜಯಿಯಾದ ನಂತರ ಯಜ್ಞದಾನಾದಿ ಶುಭಕಾರ್ಯ ಗಳನ್ನು ಮಾಡುತ್ತಾ ನಿಷ್ಕಾಮ ಕರ್ಮಿಯಾಗು. ತದನಂತರ ಗುಣಾತೀತನಾಗು. ಆಮೇಲೆ ಮುಕ್ತಿಯ ಅಧಿಕಾರಿ ಯಾಗುವೆ." ಈ ರೀತಿ ಅರ್ಜುನನಿಗೆ ಜೀವನವಿಡೀ ಮಾಡ ಬೇಕಾದ ಕರ್ತವ್ಯಗಳ ಉಪದೇಶವನ್ನು ಮಾಡಲಾಗಿದೆ. ಇಲ್ಲಿ ನೆನಪಿನಲ್ಲಿಡಬೇಕಾದ ವಿಷಯವೇ ನೆಂದರೆ ಯಾವ ರೀತಿ ಪ್ರಥಮ ದರ್ಜೆಯವರಿಗೆ ಎಂ.ಎ. ಕ್ಲಾಸಿನ ಪುಸ್ತಕಗಳನ್ನೂ ಕಲಿಸುವುದಿಲ್ಲವೋ, ಅದೇ ರೀತಿ ಈ ಶ್ಲೋಕದ ಉಪದೇಶ ಕೇವಲ ಗುಣಾತೀತನಿಗೆ ವಿನಾಃ ಸರ್ವಸಾಧಾರಣರಿಗಲ್ಲ. ಸರ್ವ ಸಾಧಾರಣರೂ ಸಹ ಇದನ್ನು ತಮಗೂ ಅನ್ವಯಿಸುತ್ತದೆ. ಎಂದು ತಿಳಿದು ವರ್ಣಾಶ್ರಮ ಧರ್ಮ ಮತ್ತು ಕರ್ಮಗಳನ್ನು ಬಿಟ್ಟರೆ 'ಇತೋ ಭ್ರಷ್ಟಸ್ತತೋಭ್ರಷ್ಟ' ರಾಗುವುದರಲ್ಲಿ ಸಂಶಯವಿಲ್ಲ.

❑